"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ: 12ನೇ ಜುಲೈ 2019
ಶುಕ್ರವಾರ

## ವಿಷಯಾನುಕ್ರಮಣಿಕೆ

1. **ಸಂತಾಪ ಸೂಚನೆಗಳು**

ವಿಷಯ: ಪೌರಾಡಳಿತ ಸಚಿವರು ಹಾಗೂ ವಿಧಾನ ಸಭೆಯ ಸದಸ್ಯರಾಗಿದ್ದ ಶ್ರೀ ಸಿ.ಎಸ್.ಶಿವಳ್ಳಿ, ವಿಧಾನ ಪರಿಷತ್ತಿನ ಮಾಜಿ ಸದಸ್ಯರುಗಳಾದ ಶ್ರೀ ಬಸಗೌಡ ಅಪ್ಪಯ್ಯಗೌಡ ಪಾಟೀಲ್ ಮತ್ತು ಶ್ರೀ ಎಸ್.ಎಂ.ಶಂಕರ್, ಕೇಂದ್ರದ ಮಾಜಿ ಸಚಿವರು ಹಾಗೂ ಲೋಕಸಭೆಯ ಮಾಜಿ ಸದಸ್ಯರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ವಿ.ಧನಂಜಯ ಕುಮಾರ್, ವಿಧಾನ ಸಭೆಯ ಮಾಜಿ ಸದಸ್ಯರುಗಳಾದ ಶ್ರೀ ಕೆ.ಎಲ್.ಶಿವಲಿಂಗೇಗೌಡ, ಶ್ರೀ ಎಸ್.ಎಸ್.ಅರಕೇರಿ (ಸಿದ್ದಾರ್ಥ ಸಂಗಪ್ಪ ಅರಕೇರಿ), ಶ್ರೀಮತಿ ದಮಯಂತಿ ಬೋರೇಗೌಡ, ಶ್ರೀ ಚನ್ನವೀರಯ್ಯ ಶಾಂತಯ್ಯ ಮುತ್ತಿನ ಪೆಂಡಿಮಠ, ಡಾ:ವಿಜಯಕುಮಾರ್ ಖಂಡ್ರೆ, ಶ್ರೀ ಗೋಪಾಲ್ ಭಂಡಾರಿ ಹೆಚ್, ಶ್ರೀಮತಿ ಶಾರದವ್ವ ಎಂ.ಪಟ್ಟಣ, ಡಾ:ಎನ್.ಬಿ.ನಂಜಪ್ಪ, ಶ್ರೀ ಎಂ.ಸತ್ಯನಾರಾಯಣ, ಶ್ರೀ ಸಂಭಾಜಿ ಲಕ್ಷ್ಮಣ ಪಾಟೀಲ್, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ, ಭಾರತೀಯ ಸಾಹಿತ್ಯ, ಸಂಸ್ಕೃತಿ, ಸಿನಿಮಾ, ನಾಟಕ, ಲೇಖಕ, ಚಿಂತಕ ಮತ್ತು ಹೋರಾಟಗಾರರಾದ ಡಾ:ಗಿರೀಶ್ ಕಾರ್ನಾಡ್ ಮತ್ತು ಕನ್ನಡ ರಂಗಭೂಮಿಯ ಖ್ಯಾತ ಹಿರಿಯ ಕಲಾವಿದ "ನಟರತ್ನಾಕರ" ಮಾಸ್ಟರ್ ಹಿರಣಯ್ಯ ಅವರುಗಳ ನಿಧನದ ಕುರಿತು

- ಶ್ರೀ ಎಸ್.ರವಿ
- ಶ್ರೀ ಹೆಚ್.ಎಂ.ರೇವಣ್ಣ
- ಶ್ರೀ ಎಸ್.ಆರ್.ಪಾಟೀಲ್
- ಶ್ರೀ ರಘುನಾಥರಾವ್ ಮಲ್ಕಾಪೂರೆ
- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಡಾ:ಜೈಮಾಲ (ಸಭಾನಾಯಕರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)

~~~~~

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(076) 12.7.2019 1.00 ಪಿಕೆ:ಎಕೆ

# ಕರ್ನಾಟಕ ವಿಧಾನ ಪರಿಷತ್ತು

## ಶುಕ್ರವಾರ, 12ನೇ ಜುಲೈ 2019

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ *ಮಧ್ಯಾಹ್ನ 1 ಗಂಟೆ 01 ನಿಮಿಷಕ್ಕೆ* ಸಮಾವೇಶಗೊಂಡಿತು.**

**ಸಭಾಪತಿಯವರಾದ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ) ಅವರು ಸಭಾಪೀಠದಲ್ಲಿ ಉಪಸ್ಥಿತರಿದ್ದರು.**

(ಸದನದ ಕಲಾಪವು "ವಂದೇ ಮಾತರಂ" ರಾಷ್ಟ್ರಗಾನದೊಂದಿಗೆ ಪ್ರಾರಂಭವಾಯಿತು)

### 1. ಸಂತಾಪ ಸೂಚನೆಗಳು

**ವಿಷಯ: ಪೌರಾಡಳಿತ ಸಚಿವರು ಹಾಗೂ ವಿಧಾನ ಸಭೆಯ ಸದಸ್ಯರಾಗಿದ್ದ ಶ್ರೀ ಸಿ.ಎಸ್.ಶಿವಳ್ಳಿ, ವಿಧಾನ ಪರಿಷತ್ತಿನ ಮಾಜಿ ಸದಸ್ಯರುಗಳಾದ ಶ್ರೀ ಬಸಗೌಡ ಅಪ್ಪಯ್ಯಗೌಡ ಪಾಟೀಲ್ ಮತ್ತು ಶ್ರೀ ಎಸ್.ಎಂ.ಶಂಕರ್, ಕೇಂದ್ರದ ಮಾಜಿ ಸಚಿವರು ಹಾಗೂ ಲೋಕಸಭೆಯ ಮಾಜಿ ಸದಸ್ಯರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ವಿ.ಧನಂಜಯ ಕುಮಾರ್, ವಿಧಾನ ಸಭೆಯ ಮಾಜಿ ಸದಸ್ಯರುಗಳಾದ ಶ್ರೀ ಕೆ.ಎಲ್.ಶಿವಲಿಂಗೇಗೌಡ, ಶ್ರೀ ಎಸ್.ಎಸ್.ಅರಕೇರಿ (ಸಿದ್ಧಾರ್ಥ ಸಂಗಪ್ಪ ಅರಕೇರಿ), ಶ್ರೀಮತಿ ದಮಯಂತಿ ಬೋರೇಗೌಡ, ಶ್ರೀ ಚನ್ನವೀರಯ್ಯ ಶಾಂತಯ್ಯ ಮುತ್ತಿನ ಪೆಂಡಿಮಠ, ಡಾ:ವಿಜಯಕುಮಾರ್ ಖಂಡ್ರೆ, ಶ್ರೀ ಗೋಪಾಲ್ ಭಂಡಾರಿ ಹೆಚ್, ಶ್ರೀಮತಿ ಶಾರದವ್ವ ಎಂ.ಪಟ್ಟಣ, ಡಾ:ಎನ್.ಬಿ.ನಂಜಪ್ಪ, ಶ್ರೀ ಎಂ.ಸತ್ಯನಾರಾಯಣ, ಶ್ರೀ ಸಂಭಾಜಿ ಲಕ್ಷ್ಮಣ ಪಾಟೀಲ್, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ, ಭಾರತೀಯ ಸಾಹಿತ್ಯ, ಸಂಸ್ಕೃತಿ, ಸಿನಿಮಾ, ನಾಟಕ, ಲೇಖಕ, ಚಿಂತಕ ಮತ್ತು ಹೋರಾಟಗಾರರಾದ ಡಾ:ಗಿರೀಶ್ ಕಾರ್ನಾಡ್ ಮತ್ತು ಕನ್ನಡ ರಂಗಭೂಮಿಯ ಖ್ಯಾತ ಹಿರಿಯ ಕಲಾವಿದ "ನಟರತ್ನಾಕರ" ಮಾಸ್ಟರ್ ಹಿರಣಯ್ಯ ಅವರುಗಳ ನಿಧನದ ಕುರಿತು.**

..........

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಈಗ ಸಂತಾಪ ಸೂಚನೆಗಳು.

1. **ಶ್ರೀ ಸಿ.ಎಸ್.ಶಿವಳ್ಳಿ**

**ಪೌರಾಡಳಿತ ಸಚಿವರು ಹಾಗೂ ವಿಧಾನಸಭೆಯ ಸದಸ್ಯರಾಗಿದ್ದ ಶ್ರೀ ಚೆನ್ನಬಸಪ್ಪ ಸತ್ಯಪ್ಪ ಶಿವಳ್ಳಿಯವರು ದಿನಾಂಕ:22.03.2019ರಂದು ನಿಧನ ಹೊಂದಿರುತ್ತಾರೆ.**

1962ನೇ ಮೇ, 06ರಂದು ನವಲಗುಂದ ತಾಲ್ಲೂಕಿನ ಶಲವಡಿ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ., ಪದವೀಧರರಾಗಿದ್ದು, ವೃತ್ತಿಯಲ್ಲಿ ಕೃಷಿಕರಾಗಿ, ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಇವರು 1999ರಲ್ಲಿ ಕುಂದಗೋಳ ವಿಧಾನಸಭೆ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಗೆಲುವು ಸಾಧಿಸಿ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದರು.

14ನೇ ವಿಧಾನಸಭೆ ಹಾಗೂ 15ನೇ ವಿಧಾನಸಭೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ್ದರಲ್ಲದೆ, 2015 ರಿಂದ ಸಮಾಜ ಕಲ್ಯಾಣ ಸಚಿವರ ಸಂಸದೀಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು. ಪ್ರಸ್ತುತ ಶ್ರೀ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ಸಮಿಶ್ರ ಸರ್ಕಾರದಲ್ಲಿ ಪೌರಾಡಳಿತ ಸಚಿವರಾಗಿದ್ದ ಶ್ರೀಯುತರು 1980ರ ದಶಕದಲ್ಲಿ ಕುಂದಗೋಳ ತಾಲ್ಲೂಕಿನ ಅಭಿಮಾನಿ ಸಂಘ ಹುಟ್ಟುಹಾಕಿ ಅದರ ಸಂಸ್ಥಾಪಕ ಅಧ್ಯಕ್ಷರಾಗಿ, ಯುವ ಮುಖಂಡರಾಗಿ ಗುರುತಿಸಿಕೊಂಡಿದ್ದರು. ಶ್ರೀಯುತರು ಮಹದಾಯಿ ನೀರಿಗಾಗಿ ಕುಂದಗೋಳದಿಂದ-ಕಣಕುಂಬಿವರೆಗೆ ಪಾದಯಾತ್ರೆ ನಡೆಸಿದ್ದರು. ದೆಹಲಿಯ ಜಂತರ್-ಮಂತರ್‌ನಲ್ಲಿ ಉಪವಾಸ ಸತ್ಯಾಗ್ರಹ ಕೈಗೊಂಡು ಗಮನ ಸೆಳೆದಿದ್ದ ಇವರು ಜನರ ನಡುವೆ ಬೆಳೆದ ನಾಯಕ ಎಂದೇ ಖ್ಯಾತಿ ಗಳಿಸಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

**2.ಬಸಗೌಡ ಅಪ್ಪಯ್ಯಗೌಡ ಪಾಟೀಲ್**

**ಹಿರಿಯ ಗಾಂಧಿವಾದಿ, ಸಹಕಾರಿ ಧುರೀಣ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಬಸಗೌಡ ಅಪ್ಪಯ್ಯಗೌಡ ಪಾಟೀಲ್ ಅವರು ದಿನಾಂಕ: 20.02.2019ರಂದು ನಿಧನ ಹೊಂದಿರುತ್ತಾರೆ.**

1921ನೇ ಸೆಪ್ಟೆಂಬರ್ 11ರಂದು ಚಿಕ್ಕೋಡಿ ತಾಲ್ಲೂಕು, ಮೂಗಲಿ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದು, ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಇವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1988-94ರ ಅವಧಿಗೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಯಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ, ಹುಕ್ಕೇರಿ ಜಿಲ್ಲೆಯ ಸಂಕೇಶ್ವರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧ್ಯಕ್ಷರಾಗಿ ಹಾಗೂ ಉಪಾಧ್ಯಕ್ಷರಾಗಿ, ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯ ಸಂಸ್ಥಾಪಕ ಸದಸ್ಯರಾಗಿ ನಂತರ ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಧಾರವಾಡದಲ್ಲಿ ಕೃಷಿ ಕಾಲೇಜು, ಕೃಷಿ ವಿಶ್ವವಿದ್ಯಾಲಯ ಹಾಗೂ ಸಂಕೇಶ್ವರದಲ್ಲಿ ಕೃಷಿ ಸಂಶೋಧನಾ ಕೇಂದ್ರ ಸ್ಥಾಪನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಕೃಷಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. 1956ರಲ್ಲಿ ಅಪ್ಪಣ್ಣಗೌಡ ಪಾಟೀಲರ ಜೊತೆಗೂಡಿ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ ಸ್ಥಾಪಿಸಿದ್ದರು. ಸ್ವಾತಂತ್ರ್ಯ ಚಳವಳಿ, ಕರ್ನಾಟಕ ಏಕೀಕರಣ ಹೋರಾಟಗಳಲ್ಲಿ ಪಾಲ್ಗೊಂಡಿದ್ದರು. ರಾಜಕೀಯವಾಗಿ ಸಂಸ್ಥಾ ಕಾಂಗ್ರೆಸ್ ಜತೆ ಗುರುತಿಸಿಕೊಂಡಿದ್ದ ಅವರು, ನಂತರ ಜನತಾ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

2000ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ 'ಸಹಕಾರ ಶಿಲ್ಪಿ' ಪ್ರಶಸ್ತಿಗೆ ಭಾಜನರಾಗಿದ್ದರು. ಅಲ್ಲದೆ ನಿಡಸೋಸಿಯಂತಹ ಗ್ರಾಮೀಣ ಪ್ರದೇಶದಲ್ಲಿ ಇಂಜಿನಿಯರಿಂಗ್ ಕಾಲೇಜು ಸ್ಥಾಪನೆಯಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಿರುವ ಹಿರಿಮೆಗೆ ಪಾತ್ರರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ಗಾಂಧಿವಾದಿ, ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

**3.ಎಸ್.ಎಂ.ಶಂಕರ್**

**ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಎಸ್.ಎಂ.ಶಂಕರ್ ಅವರು ದಿನಾಂಕ: 22.06.2019ರಂದು ನಿಧನ ಹೊಂದಿರುತ್ತಾರೆ.**

1936ನೇ ಅಕ್ಟೋಬರ್ 15ರಂದು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಸೋಮನಹಳ್ಳಿಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ.,ಪದವೀಧರರಾಗಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. 2004-2010ರ ಅವಧಿಗೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಯಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಮದ್ದೂರು ತಾಲ್ಲೂಕಿನ ಕೊಪ್ಪದ ಎಸ್.ಸಿ.ಮಲ್ಲಯ್ಯ ಸಕ್ಕರೆ ಕಾರ್ಖಾನೆಯ ಸಂಸ್ಥಾಪಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಧ್ಯಕ್ಷರಾಗಿ, ಎಸ್.ಸಿ.ಮಲ್ಲಯ್ಯ ವಿದ್ಯಾಸಂಸ್ಥೆಯ ಕಾರ್ಯದರ್ಶಿಯಾಗಿ, ಮಂಡ್ಯ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘದ ಒಕ್ಕೂಟದ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಹಲವಾರು ಸಮಾಜ ಮುಖಿಕಾರ್ಯಗಳಲ್ಲಿ ತೊಡಗಿಸಿಕೊಂಡು ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

**4. ಶ್ರೀ ವಿ.ಧನಂಜಯ್‌ಕುಮಾರ್**

**ಕೇಂದ್ರದ ಮಾಜಿ ಸಚಿವರು ಹಾಗೂ ಲೋಕಸಭೆಯ ಮಾಜಿ ಸದಸ್ಯರು ಮತ್ತು ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ವಿ.ಧನಂಜಯ ಕುಮಾರ್ ಅವರು ದಿನಾಂಕ: 04.03.2019ರಂದು ನಿಧನ ಹೊಂದಿರುತ್ತಾರೆ.**

1951ನೇ ಜುಲೈ 04ರಂದು ದಕ್ಷಿಣ ಕನ್ನಡ ಜಿಲ್ಲೆಯ ವೇಣೂರು ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಬಿ.ಎಸ್ಸಿ., ಹಾಗೂ ಎಲ್.ಎಲ್.ಬಿ., ಪದವೀಧರರಾಗಿದ್ದು ವೃತ್ತಿಯಲ್ಲಿ ವಕೀಲರಾಗಿದ್ದರು

1983ರಲ್ಲಿ ಮಂಗಳೂರು ವಿಧಾನ ಸಭೆ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು 1991ರಲ್ಲಿ ಮಂಗಳೂರು ಲೋಕಸಭೆ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದರು. ನಂತರ 1996, 1998 ಹಾಗೂ 1999ರಲ್ಲಿ ಸತತವಾಗಿ 4 ಬಾರಿ ಲೋಕಸಭಾ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿದ್ದರು. ಶ್ರೀಯುತ ವಾಜಪೇಯಿ ಅವರು ಮೊದಲ ಬಾರಿ ಪ್ರಧಾನಿಯಾಗಿದ್ದಾಗ ಕೇಂದ್ರದ ನಾಗರೀಕ ವಿಮಾನಯಾನ ಖಾತೆ ಮತ್ತು ಪ್ರವಾಸೋದ್ಯಮ ಸಚಿವರಾಗಿ ಹಾಗೂ ಎರಡನೇ ಅವಧಿಯಲ್ಲಿ ಹಣಕಾಸು ರಾಜ್ಯ ಸಚಿವರಾಗಿ ಹಾಗೂ ಜವಳಿ ಖಾತೆ ರಾಜ್ಯ ಸಚಿವರಾಗಿ ಸೇವೆಯನ್ನು ಸಲ್ಲಿಸಿದ್ದರು. ಅಲ್ಲದೆ ಕರ್ನಾಟಕ ರಾಜ್ಯ ಭಾರತೀಯ ಜನತಾ ಯುವ ಮೋರ್ಚಾದ ಉಪಾಧ್ಯಕ್ಷರಾಗಿ ಹಾಗೂ ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿದ್ದರು.

ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋ

**5.ಡಾ॥ ಗಿರೀಶ್ ಕಾರ್ನಾಡ್**

**ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು, ಕನ್ನಡ ಸಾಹಿತ್ಯ ಲೋಕ ಕಂಡ ಅದ್ಭುತ ನಾಟಕಕಾರ, ಸಾಹಿತಿ, ಚಿತ್ರ ನಟ ಮತ್ತು ನಿರ್ದೇಶಕರಾಗಿದ್ದ ಡಾ: ಗಿರೀಶ್‌ಕಾರ್ನಾಡ್ ಅವರು ದಿನಾಂಕ: 10.06.2019ರಂದು ನಿಧನ ಹೊಂದಿರುತ್ತಾರೆ.**

1938ನೇ ಮೇ 19ರಂದು ಮಹಾರಾಷ್ಟ್ರದ ಮಾಥೇರಾನ್ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಸ್ನಾತಕೋತ್ತರ ಪದವೀಧರರಾಗಿದ್ದು, ವೃತ್ತಿಯಲ್ಲಿ ಲೇಖಕರಾಗಿದ್ದರು. ತಮ್ಮ ಪ್ರಾಥಮಿಕ ಶಿಕ್ಷಣವನ್ನು ಉತ್ತರಕನ್ನಡ ಜಿಲ್ಲೆಯ ಶಿರಸಿಯಲ್ಲಿ ಪಡೆದಿದ್ದು, ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಪಡೆದ ನಂತರ ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಿಂದ ತತ್ವಶಾಸ್ತ್ರ, ರಾಜಕೀಯ ಹಾಗೂ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದರು.

ರಾಷ್ಟ್ರದ ಸೃಜನಶೀಲ ಕ್ಷೇತ್ರಕ್ಕೆ ಶ್ರೀಯುತರು ಕನ್ನಡ ನಾಡಿನ ಅಮೂಲ್ಯ ಕೊಡುಗೆಯಾಗಿದ್ದರು. .ಕನ್ನಡದ ನಾಡು, ನುಡಿ, ಸಂಸ್ಕೃತಿ, ಕಲೆ ಮುಂತಾದ ರಂಗಗಳಲ್ಲಿ ಅದ್ವಿತೀಯ ಸಾಧನೆ ಮಾಡಿದ್ದರಲ್ಲದೆ ರಾಷ್ಟ್ರದ ವಿವಿಧ ಭಾಷೆಗಳಿಗೆ ಮತ್ತು ಅನೇಕ ವಿದೇಶಿ ಭಾಷೆಗಳಿಗೆ ಕನ್ನಡದ ಸತ್ವವನ್ನು ಪರಿಚಯಿಸಿದ ಅಂತರರಾಷ್ಟ್ರೀಯ ಪ್ರತಿಭೆಯಾಗಿದ್ದರು.

ಆಕ್ಸ್‌ಫರ್ಡ್ ಡಿಬೇಟ್ ಕ್ಲಬ್‌ಗೆ ಅಧ್ಯಕ್ಷರಾಗಿ ಆಯ್ಕೆಯಾಗುವ ಮೂಲಕ ಈ ಗೌರವ ಪಡೆದ ಮೊದಲ ಏಷ್ಯಾದ ಪ್ರಜೆ ಎಂದೆನಿಸಿಕೊಂಡರು. ಬಹುಭಾಷಾ ಪಂಡಿತರೆಂಬ ಹಿರಿಮೆ ಪಡೆದಿರುವ ಕಾರ್ನಾಡ್, ಷಿಕಾಗೋ ವಿಶ್ವವಿದ್ಯಾಲಯದಲ್ಲಿ ಸಂದರ್ಶನ ಪ್ರಾಧ್ಯಾಪಕರಾಗಿ ಕಾರ್ನಾಡ್ ಸೇವೆ ಸಲ್ಲಿಸಿದ್ದಾರೆ.

ಅತ್ಯಂತ ಕಿರಿಯ ವಯಸ್ಸಿನಲ್ಲೇ ಯಕ್ಷಗಾನ ಹಾಗೂ ನಾಟಕಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ನಾಟಕಕಾರರಾಗಿ, ವಿಮರ್ಶಕರಾಗಿ, ಬರಹಗಾರರಾಗಿ, ಕಲಾವಿದರಾಗಿ, ಚಿಂತನಕಾರರಾಗಿ ಮತ್ತು ಮೇರು ಸಾಹಿತಿಗಳಾಗಿ ಪ್ರಸಿದ್ದರಾಗಿದ್ದ ಶ್ರೀಯುತರು ಫಿಲಂ ಅಂಡ್ ಟೆಲಿವಿಷನ್ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯಾದ ನಿರ್ದೇಶಕರಾಗಿ ಹಾಗೂ ಸಂಗೀತ ನಾಟಕ ಅಕಾಡೆಮಿ ಮತ್ತು ನ್ಯಾಷನಲ್ ಅಕಾಡೆಮಿ ಆಫ್ ಪರ್‌ಫಾರ್ಮಿಂಗ್ ಆರ್ಟ್ಸ್‌ನ ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಶ್ರೀಯುತರು ಒಟ್ಟು 14 ನಾಟಕಗಳನ್ನು ರಚಿಸಿದ್ದು, ಯಯಾತಿ ಇವರ ಮೊದಲ ಸಾಹಿತ್ಯ ಕೃತಿಯಾಗಿದ್ದು, ಆ ಪೈಕಿ ತುಘಲಕ್, ಹಯವದನ, ಅಂಜುಮಲ್ಲಿಗೆ, ನಾಗಮಂಡಲ, ತಲೆದಂಡ ನಾಟಕಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಮುಖವಾದವುಗಳಾಗಿರುತ್ತದೆ. ಇವರು ನಿರ್ದೇಶಿಸಿದ ಪ್ರಮುಖ ಚಲನಚಿತ್ರಗಳೆಂದರೆ ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ, ಕಾಡು, ಒಂದಾನೊಂದು ಕಾಲದಲ್ಲಿ, ಉತ್ಸವ, ಗೋಧೂಳಿ, ಕಾನೂರು ಹೆಗ್ಗಡತಿ ಇತ್ಯಾದಿ.

ಶ್ರೀಯುತರು ಕನ್ನಡ, ಹಿಂದಿ ಹಾಗೂ ಇತರ ಭಾಷೆಗಳ ಚಲನಚಿತ್ರಗಳಲ್ಲಿ ನಟಿಸಿ ಜನ ಮನ್ನಣೆ ಪಡೆದಿದ್ದರು. ಇವರ ಅಭಿನಯದ 'ಸಂಸ್ಕಾರ' ಕನ್ನಡ ಚಲನಚಿತ್ರಕ್ಕೆ ರಾಷ್ಟ್ರಪತಿಗಳ ಸ್ವರ್ಣ ಕಮಲ ಪ್ರಶಸ್ತಿ ಲಭಿಸಿದೆ. ಪದ್ಮಶ್ರೀ, ಪದ್ಮಭೂಷಣ, ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಂಗೀತ ಮತ್ತು ನಾಟಕ ಅಕಾಡೆಮಿ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್, ಸಾಹಿತ್ಯ ಅಕಾಡೆಮಿ, ಕಾಳಿದಾಸ ಸಮ್ಮಾನ್ ಮತ್ತು ರಾಜ್ಯೋತ್ಸವ ಪ್ರಶಸ್ತಿ, ಗುಬ್ಬಿ ವೀರಣ್ಣ ಪ್ರಶಸ್ತಿ ಅಲ್ಲದೆ ಸೃಜನಶೀಲ ಸಾಹಿತ್ಯಕ್ಕಾಗಿ "ಅಮರ್ ಉಜಾಲಾ "ಪ್ರಶಸ್ತಿ ಹೀಗೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಕನ್ನಡ ಸಾರಸ್ವತ ಲೋಕದ ಒಬ್ಬ ಹಿರಿಯ ಸಾಹಿತಿ, ಚಿಂತಕ ಹಾಗೂ ಬಹುಮುಖ ವ್ಯಕ್ತಿತ್ವದ ಪ್ರತಿಭೆಯನ್ನು ಕಳೆದುಕೊಂಡಂತಾಗಿದೆ.

**<u>6.ಮಾಸ್ಟರ್ ಹಿರಣಯ್ಯ</u>**

**ಕನ್ನಡ ರಂಗ ಭೂಮಿಯ ಹಿರಿಯಕಲಾವಿದ, ಅದ್ಭುತ ನಾಟಕಕಾರ, ರಂಗಕರ್ಮಿ ಮಾಸ್ಟರ್ ಹಿರಣಯ್ಯ ಅವರು ದಿನಾಂಕ: 02.05.2019ರಂದು ನಿಧನ ಹೊಂದಿರುತ್ತಾರೆ.**

1934ನೇ ಫೆಬ್ರವರಿ 15ರಂದು ಮೈಸೂರಿನಲ್ಲಿ ಜನಿಸಿದ್ದ ಶ್ರೀಯುತರು ಇಂಟರ್ ಮೀಡಿಯೆಟ್‌ವರೆಗೆ ವ್ಯಾಸಂಗ ಮಾಡಿದ್ದು, ತಂದೆಯವರೊಂದಿಗೆ ಕೂಡಿ ರಂಗಶಿಕ್ಷಣ ಪಡೆದಿದ್ದರು. 1940ರಲ್ಲಿ 'ವಾಣಿ' ಚಲನಚಿತ್ರದ ಮೂಲಕ ಕಲಾರಂಗಕ್ಕೆ ಪಾದಾರ್ಪಣೆ ಮಾಡಿದ್ದ ಶ್ರೀಯುತರು 1948ರಲ್ಲಿ ರಂಗಭೂಮಿ ಕಲಾವಿದರಾಗಿ ಸಣ್ಣ ಸಣ್ಣ ಪಾತ್ರಗಳ ಮೂಲಕ ಅಭಿನಯಿಸಲು ಪ್ರಾರಂಭಿಸಿದರು. 1953 ರಲ್ಲಿ "ಹಿರಣಯ್ಯ ಮಿತ್ರ ಮಂಡಲಿ"ಯನ್ನು ಆರಂಭಿಸಿ "ಲಂಚಾವತಾರ" ನಾಟಕವನ್ನು ರಚಿಸಿ ರಂಗ ಪ್ರಯೋಗ ಮಾಡಿದ್ದರು. ಮೈಸೂರು ಮಹಾರಾಜರಿಂದ "ನಟರತ್ನಾಕರ" ಬಿರುದನ್ನು ಪಡೆದ ಶ್ರೀಯುತರು ನಂತರ 'ನಡುಬೀದಿ ನಾರಾಯಣ'ದಲ್ಲಿ ತೀರ್ಥರೂಪುವಾಗಿ, 'ಭ್ರಷ್ಟಾಚಾರ'ದಲ್ಲಿ ಧಫೇದಾರ್ ಮುರಾರಿಯಾಗಿ, 'ಸದಾರಮೆ'ಯಲ್ಲಿ ಕಳ್ಳನಾಗಿ, 'ಮಕ್ಮಲ್‌ಟೋಪಿ'ಯಲ್ಲಿ ನಾಣಿಯಾಗಿ ಅಭಿನಯಿಸಿ ಜನಪ್ರಿಯಗೊಂಡಿದ್ದರಲ್ಲದೆ, 25ಕ್ಕೂ ಹೆಚ್ಚು ನಾಟಕಗಳನ್ನು ರಂಗಭೂಮಿಗೆ ತಂದು ಗಳಿಸಿದ ಕೀರ್ತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಪಾರವಾದುದು. ಇವರ 'ಲಂಚಾವತಾರ' ನಾಟಕವೊಂದೇ ಹತ್ತು ಸಾವಿರಕ್ಕೂ ಹೆಚ್ಚು ಪ್ರದರ್ಶನ ಕಂಡು ದಾಖಲೆಯನ್ನು ನಿರ್ಮಿಸಿದೆ.

ಶ್ರೀಯುತರು ನಾಟಕಗಳ ಮೂಲಕ ಸಾರ್ವಜನಿಕ ವಲಯದಲ್ಲಿ, ಸಮಾಜದ ಅಂಕು ಡೊಂಕುಗಳ ಬಗ್ಗೆ ವಿಚಾರಕ್ರಾಂತಿ ಮೂಡಿಸಿದರು. ಅವರ ಸಾಮಾಜಿಕ ಕಾಳಜಿ, ನಿರ್ದಾಕ್ಷಿಣ್ಯ ಮಾತು, ಕನ್ನಡದ ಬಗ್ಗೆ ಹಾಗೂ ಜನತೆಗೆ ಅವರು ತೋರಿದ ಪ್ರೀತಿ, ಸರಳ ಸಜ್ಜನಿಕೆ, ಅನನ್ಯವಾದುದು. ನಾಟಕಗಳ ಮುಖೇನ ವೈಚಾರಿಕ ಕ್ರಾಂತಿ ಮೂಢಿಸಿದ್ದರಲ್ಲದೆ, ತಮ್ಮ ಮೊನಚು ವಿಡಂಬನೆ ಹಾಗೂ ವ್ಯಂಗ್ಯಗಳಿಂದ ಕೂಡಿದ ಸಂವಾದದ ಮೂಲಕ ಸಮಾಜ ಹಾಗೂ ರಾಜಕೀಯದ ಅಂಕುಡೊಂಕುಗಳ ಬಗ್ಗೆ ವಿಚಾರಕ್ರಾಂತಿ ಮೂಡಿಸಿದ್ದರು.

ಕರ್ನಾಟಕ ರಾಜ್ಯ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ನಾಟಕ ಅಕಾಡೆಮಿ ಪ್ರಶಸ್ತಿ, ರಂಗಭೂಮಿ ಪ್ರಶಸ್ತಿ, ಅತ್ಯುನ್ನತ ರಂಗ ಪ್ರಶಸ್ತಿಯಾದ ಡಾ:ಗುಬ್ಬಿ ವೀರಣ್ಣ ಪ್ರಶಸ್ತಿಗಳು ಸೇರಿದಂತೆ ಹತ್ತು ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

**ಇವರ ನಿಧನದಿಂದಾಗಿ ರಾಜ್ಯವು ಹೆಸರಾಂತ ಹಿರಿಯ ಕನ್ನಡದ ನಾಟಕಕಾರ, ರಂಗಕರ್ಮಿ, ಚಲನಚಿತ್ರ ಹಾಗೂ ಕಿರುತೆರೆ ಕಲಾವಿದರೊಬ್ಬರನ್ನು ಕಳೆದುಕೊಂಡಂತಾಗಿದೆ.**

(ಮುಂದು . . .)

(77) 01:10 12-07-2019 ಎಸ್(ಬಿಕೆಪಿ)/ಎಕೆ

**ಶ್ರೀ ಎಸ್.ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ವಿಧಾನಸಭೆಯ ಶಾಸಕರಾಗಿದ್ದಂತಹ ಶ್ರೀ ಕೆ.ಎಲ್. ಶಿವಲಿಂಗೇಗೌಡರು, ಕಳೆದ ಶನಿವಾರ ನಿಧನರಾದರು. ಭಾನುವಾರ ಅವರ ಅಂತ್ಯಕ್ರಿಯೆ ನಡೆಯಿತು. ಶ್ರೀಯುತರು ಮೂರು ಬಾರಿ ವಿಧಾನಸಭೆಯ ಶಾಸಕರಾಗಿದ್ದರು. ಅವರ ನಿಧನದ ವಿಚಾರ ಈ ಸದನದಲ್ಲಿ ಪ್ರಸ್ತಾಪ ಆಗದೇ ಇರುವುದು ಮತ್ತು ಸರ್ಕಾರದ ಗಮನಕ್ಕೆ ಬಾರದಿರುವುದು ಬಹಳ ಶೋಚನೀಯ. ಅವರ ಬಗ್ಗೆ ಸಂತಾಪ ಸೂಚನೆ ನಿರ್ಣಯದಲ್ಲಿ ಬಿಟ್ಟು ಹೋಗಿರುವುದು ನಿಜಕ್ಕೂ ಕೂಡ ವಿಷಾದನೀಯ. ಏಕೆ ಬಿಟ್ಟು ಹೋಯಿತೋ ಗೊತ್ತಿಲ್ಲ. ಶ್ರೀಯುತರ ನಿಧನದ ಬಗ್ಗೆ ಸಂತಾಪ ಸೂಚನೆಯಲ್ಲಿ ಸೇರಿಸಿ, ದಯಮಾಡಿ ಅವರ ನಿಧನದ ವಿಚಾರವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

(078) 12.07.2019 01.20 ಎಸ್‌ವಿ-ಆರ್‌ಎನ್

**(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಇಲ್ಲಿಯವರೆಗೆ ವಿಧಾನ ಸಭೆಯ ಸದಸ್ಯರಾಗಿದ್ದಂತಹವರು ನಿಧನ ಹೊಂದಿದಂತಹ ಸಂದರ್ಭದಲ್ಲಿ ಅವರ ಬಗ್ಗೆ ಸಂತಾಪ ಸೂಚನೆಯನ್ನು ವಿಧಾನ ಸಭೆಯಲ್ಲಿ ಮಾತ್ರ ಮಾಡಲಾಗುತ್ತಿತ್ತು. ಸಚಿವರಾಗಿದ್ದವರಿಗೆ ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಎರಡೂ ಸದನಗಳಲ್ಲಿ ಸಂತಾಪ ಸೂಚನೆ ಮಾಡಲಾಗುತ್ತಿತ್ತು. ವಿಧಾನ ಪರಿಷತ್ತಿನ ಸದಸ್ಯರಾಗಿದ್ದವರಿಗೆ ವಿಧಾನ ಪರಿಷತ್ತಿನಲ್ಲಿ ಮಾತ್ರ ಸಂತಾಪ ಸೂಚನೆ ಮಾಡಲಾಗುತ್ತಿತ್ತು. ನೀವು ಪ್ರಸ್ತಾಪ ಮಾಡಿರತಕ್ಕಂತಹ ವಿಚಾರಗಳು ಈಗಾಗಲೇ ನಮ್ಮ ಚಿಂತನೆಯಲ್ಲಿದೆ. ಮಾನ್ಯ ವಿರೋಧ ಪಕ್ಷದ ನಾಯಕರ ಹಾಗೂ ಮಾನ್ಯ ಸಭಾನಾಯಕರ ಹತ್ತಿರ ಈ ವಿಷಯವನ್ನು ಈಗಾಗಲೇ ಚರ್ಚೆ ಮಾಡಲಾಗಿದೆ. ಮುಂದೆ ಈ ವಿಷಯವನ್ನು ಯಾವ ರೀತಿ ತೆಗೆದುಕೊಳ್ಳಬೇಕೆಂದು ನೋಡುವುದರೊಂದಿಗೆ ಎರಡೂ ಸದನಗಳಲ್ಲಿ ಇದನ್ನು ಯಾವ ರೀತಿ ನಡೆಸಿಕೊಂಡು ಹೋಗಬೇಕೆಂಬ ಚಿಂತನೆಯಿದೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದಂತಹವರಿಗೆ ನಾವು ಇಲ್ಲಿ ಸಂತಾಪ ಸೂಚನೆ ಮಾಡುತ್ತೇವೆ. ವಿಧಾನ ಪರಿಷತ್ತು ಹಾಗೂ ವಿಧಾನ ಸಭೆಯಲ್ಲಿ ಸೇವೆ ಸಲ್ಲಿಸಿದವರನ್ನು ಇಲ್ಲಿ ಏಕೆ ಗಣನೆಗೆ ತೆಗೆದುಕೊಳ್ಳಬಾರದು?

**ಸಭಾಪತಿಯವರು:-** ನೀವು ಈಗಾಗಲೇ ಏನು ವಿಷಯವನ್ನು ಪ್ರಸ್ತಾಪ ಮಾಡಿರುತ್ತೀರೋ, ಅದರ ಬಗ್ಗೆ ಚರ್ಚೆ ಈಗಾಗಲೇ ನಮ್ಮ ಮಟ್ಟದಲ್ಲಿ ಆಗಿದೆ. ಮಾನ್ಯ ಸಭಾನಾಯಕರು, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಹಲವು ಹಿರಿಯ ಸದಸ್ಯರ ಬಳಿ ಈಗಾಗಲೇ ಇದರ ಬಗ್ಗೆ ಮಾತನಾಡಿದ್ದೇವೆ. ಏಕಪಕ್ಷೀಯವಾಗಿ ಒಂದು ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕಿಂತ ಎರಡೂ ಸದನಗಳಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು. ನಾವು ಮಾತ್ರ ಇಲ್ಲಿ ಸಂತಾಪ ಸೂಚನೆ ಮಾಡುವುದು, ವಿಧಾನ ಸಭೆಯಲ್ಲಿ ಮಾಡದಿರುವುದು...

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಇದನ್ನು ಯಾರೂ ಬೇಡ ಎನ್ನುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜ:-** ಮಾನ್ಯ ಸಭಾಪತಿಯವರೇ, ಈ ಸದನದಿಂದಲೇ ಪ್ರಾರಂಭ ಮಾಡಬಹುದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದನ್ನು ಸೇರಿಸಿಕೊಳ್ಳಬಹುದು. There is no wrong in it.

**ಸಭಾಪತಿಯವರು:-** ಈಗಾಗಲೇ ಇದಕ್ಕೆ ಬೇಕಾದ ತಯಾರಿಯನ್ನು ನಾವು ಮಾಡಿದ್ದೆವು. ಆದರೆ ಅನುಮತಿಯನ್ನು ಕೇಳದೆ ಏಕಪಕ್ಷೀಯವಾಗಿ ಮಾಡುವುದು ಅಷ್ಟು ಸಮಂಜಸವಲ್ಲ ಎಂದು ನಮ್ಮ ಅನಿಸಿಕೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, you have got an unfettered discretionary power. You can take any decision.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಈ ಸಲಹೆಯನ್ನು ಗಣನೆಗೆ ತೆಗೆದುಕೊಂಡು ಮುಂಬರುವ ದಿನಗಳಲ್ಲಿ ಸಂತಾಪ ಸೂಚನೆ ಮಾಡಬೇಕು.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಹಿಂದೆಯೂ ಚರ್ಚೆಯಾಗಿದೆ. ಈಗಲೂ ಚರ್ಚೆಯಾಗಿದೆ. ಮುಂದೆಯೂ ಚರ್ಚೆಯಾಗುವುದು ಬೇಡ. ಅದಕ್ಕಾಗಿ ತಾವು ಒಂದು ನಿರ್ದೇಶನವನ್ನು ನೀಡಬೇಕು.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಇಂದು ಬೆಳಿಗ್ಗೆ ನಾನು ತಮ್ಮ ಕಛೇರಿಗೆ ಬಂದಿದ್ದಾಗ ಒಂದು ವಿಷಯವನ್ನು ತಮ್ಮ ಮುಂದೆ ಪ್ರಸ್ತಾಪ ಮಾಡಿದ್ದೆನು. ಶಾಸಕರಾಗಿ ಸೇವೆ ಸಲ್ಲಿಸಿದವರು ಯಾವುದೇ ಸದನದವರಾಗಿದ್ದರೂ ಒಂದು ಮನೆಯಲ್ಲಿ ಶ್ರದ್ಧಾಂಜಲಿ ಸಲ್ಲಿಸುವುದು, ಮತ್ತೊಂದು ಮನೆಯಲ್ಲಿ ಶ್ರದ್ಧಾಂಜಲಿ ಸಲ್ಲಿಸದಿರುವುದು ಅಷ್ಟು ಸರಿಯಿರುವುದಿಲ್ಲ. ಆದುದರಿಂದ ನನ್ನ ಈ ಮಾತಿಗೆ ಈ ಸದನದ ಎಲ್ಲಾ ಮಿತ್ರರು ಸಹಮತಿಯನ್ನು ವ್ಯಕ್ತಪಡಿಸುತ್ತಾರೆಂದು ಭಾವಿಸುತ್ತೇನೆ. ತಾವು ಜಂಟಿಯಾಗಿ ಸದನದ ಕಲಾಪ ಸಲಹಾ ಸಮಿತಿಯ ಸಭೆಯನ್ನು ಸೇರಿದ ಸಂದರ್ಭದಲ್ಲಿ ಈ ಪ್ರಸ್ತಾವನೆಯನ್ನು ಇಟ್ಟು, ಯಾವುದೇ ಸದನದ ಸದಸ್ಯರು ಮೃತರಾದ ಸಂದರ್ಭದಲ್ಲಿ ಉಭಯ ಸದನಗಳಲ್ಲಿಯೂ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಮೂಲಕ ಅಗಲಿದವರಿಗೆ ಗೌರವ ಸಲ್ಲಿಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಅದರ ಬಗ್ಗೆ ಹೆಚ್ಚಿನ ಚರ್ಚೆಯ ಅವಶ್ಯಕತೆ ಇಲ್ಲ. ತಾವು ಏನು ಪ್ರಸ್ತಾಪ ಮಾಡಿದ್ದೀರೋ, ಅದು ನಮ್ಮ ಬಳಿ ಸಿದ್ಧವಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಹೆಚ್ಚಿನ ಚರ್ಚೆಗೆ ಆಸ್ಪದ ಬೇಡ. ತಮ್ಮಿಂದಲೇ ಇದು ಪ್ರಾರಂಭವಾಗಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇಂದು ಬೆಳಿಗ್ಗೆ ತಾವು ಹೇಳಿದಂತೆ ಕೆಳಮನೆ ಮತ್ತು ಮೇಲ್ಮನೆಯಲ್ಲಿ ಸೇವೆ ಸಲ್ಲಿಸಿದಂತಹ ಯಾವುದೇ ಶಾಸಕರು ನಿಧನರಾದ ಸಂದರ್ಭದಲ್ಲಿ ಸಂತಾಪ ಸೂಚನೆ ಮಾಡುವ ಪ್ರಸ್ತಾಪ ತಮ್ಮ ಮುಂದೆ ಇದೆ ಎಂಬ ಮಾತನ್ನು ತಾವು ಹೇಳಿದಿರಿ. ಅದಕ್ಕೆ ಬೇಕಾದಂತಹ ಮಾಹಿತಿಯನ್ನು ಕೂಡ ತಾವು ತರಿಸಿದ್ದೀರಿ. ಕೆಳಮನೆಯಲ್ಲಿ ಮಂಡಿಸಲಾದಂತಹ ಸಂತಾಪ ಸೂಚನಾ ಪಟ್ಟಿ ನಿಮ್ಮ ಬಳಿ ಲಭ್ಯವಿದ್ದಲ್ಲಿ, ಅದನ್ನು ಇಲ್ಲಿಯೂ ಕೂಡ ಮಂಡಿಸಬಹುದು. ನಾವು ಅದನ್ನು ಅನುಮೋದನೆ ಮಾಡಿಕೊಡುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ವಿಧಾನಮಂಡಲದ ಸದಸ್ಯರಲ್ಲದ ವಿವಿಧ ಕ್ಷೇತ್ರಗಳ ಗಣ್ಯರನ್ನು ನಾವು ಸ್ಮರಿಸುತ್ತಾ, ಅವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇವೆ. ಇನ್ನು ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಸದಸ್ಯರನ್ನು ನಾವು ಸ್ಮರಿಸುವಲ್ಲಿ ತಪ್ಪಿಲ್ಲ. ಮಾನ್ಯ ರವಿಯವರ ಕೋರಿಕೆ ಸರಿಯಾದುದಾಗಿದೆ.

**ಸಭಾಪತಿಯವರು:-** ಆಗಲಿ. ಈಗ ನಾನು ವಿಧಾನಸಭೆಯ ಸಂತಾಪ ಸೂಚನೆಯನ್ನು ಸಹ ಈ ಸದನದ ಮುಂದೆ ಓದುತ್ತೇನೆ.

**7. ಕೆ.ಎಲ್. ಶಿವಲಿಂಗೇಗೌಡ**

**ವಿಧಾನ ಸಭೆಯ ಮಾಜಿ ಸದಸ್ಯರಾದ ಕೆ.ಎಲ್. ಶಿವಲಿಂಗೇಗೌಡ ಅವರು ದಿನಾಂಕ: 06.07.2019ರಂದು ನಿಧನ ಹೊಂದಿರುತ್ತಾರೆ.**

ದಿನಾಂಕ:30.06.1927 ರಂದು ಸಾತನೂರು ಹೋಬಳಿಯ ಕಾಡಹಳ್ಳಿಯಲ್ಲಿ ಜನಿಸಿದ್ದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದರು. 1942 ರಿಂದ 1947 ರವರೆಗಿನ ಅವಧಿಯಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಂಡಿದ್ದರು. 1962 ರಲ್ಲಿ ವಿರೂಪಾಕ್ಷಿಪುರ ವಿಧಾನಸಭಾ ಕ್ಷೇತ್ರದಿಂದ ಮೊದಲ ಬಾರಿಗೆ 3ನೇ ವಿಧಾನಸಭೆ ಪ್ರವೇಶಿಸಿ, 1978 ರಲ್ಲಿ ಸಾತನೂರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಧಾನಸಭಾ ಕ್ಷೇತ್ರದಿಂದ 6ನೇ ವಿಧಾನಸಭೆಗೆ ಹಾಗೂ 1985ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಅದೇ ಕ್ಷೇತ್ರದಿಂದ 8ನೇ ವಿಧಾನಸಭೆಗೆ ಆಯ್ಕೆಯಾಗಿ ಸೇವೆಯನ್ನು ಸಲ್ಲಿಸಿದ್ದರು. **ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.**

**8. ಎಸ್. ಎಸ್. ಅರಕೇರಿ (ಸಿದ್ದಾರ್ಥ ಸಂಗಪ್ಪ ಅರಕೇರಿ)**

ವಿಧಾನ ಸಭೆಯ ಮಾಜಿ ಸದಸ್ಯರಾದ ಎಸ್.ಎಸ್.ಅರಕೇರಿ ಅವರು ದಿನಾಂಕ: 23.04.2019ರಂದು ನಿಧನ ಹೊಂದಿರುತ್ತಾರೆ.

1934ರಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಜನಿಸಿದ್ದ ಶ್ರೀಯುತರು ಎಂ.ಎ. ಹಾಗೂ ಕಾನೂನು ಪದವೀಧರರಾಗಿದ್ದರು. ವೃತ್ತಿಯಲ್ಲಿ ವಕೀಲರಾಗಿದ್ದ ಅವರು ಕೆಲವು ವರ್ಷ ಬೆಂಗಳೂರು ಕಾನೂನು ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿದ್ದರು. ಬಿಜಾಪುರ ಜಿಲ್ಲೆಯ ಬಳ್ಳೊಳ್ಳಿ ಕ್ಷೇತ್ರದಿಂದ 4ನೇ ಮತ್ತು 6ನೇ ವಿಧಾನಸಭೆಗೆ ಆಯ್ಕೆಯಾಗಿದ್ದರು. ವಾಕ್ ಚಾತುರ್ಯ ಮತ್ತು ಸೈದ್ಧಾಂತಿಕ ಮೌಲ್ಯಗಳ ಪ್ರತಿಪಾದನೆಯ ಮೂಲಕ ರಾಜ್ಯದಾದ್ಯಂತ ಮನೆಮಾತಾಗಿದ್ದ ಶ್ರೀಯುತರು 2000ದಲ್ಲಿ 'ದಿ ಬೆಸ್ಟ್ ಸಿಟಿಜನ್ಸ್ ಆಫ್ ಇಂಡಿಯಾ ಆವಾರ್ಡ್', 2014ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, 2015ರಲ್ಲಿ ಅಂಬೇಡ್ಕರ್ ಪ್ರಶಸ್ತಿ ಹಾಗೂ 2016ರಲ್ಲಿ 'ಬಸವಶ್ರೀ' ಪ್ರಶಸ್ತಿಗೆ ಭಾಜನರಾಗಿದ್ದರು. **ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.**

**9. ದಮಯಂತಿ ಬೋರೇಗೌಡ**

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀಮತಿ ದಮಯಂತಿ ಬೋರೇಗೌಡ ಅವರು ದಿನಾಂಕ: 20.02.2019 ರಂದು ನಿಧನ ಹೊಂದಿರುತ್ತಾರೆ.

ದಿನಾಂಕ: 03.04.1928 ರಂದು ಕೊಯಮತ್ತೂರಿನಲ್ಲಿ ಜನಿಸಿದ್ದು, Literature-I-Hons ವಿದ್ಯಾರ್ಹತೆ ಪಡೆದಿದ್ದರು. ಗೃಹಿಣಿಯಾಗಿದ್ದರೂ ಸಹ ಅವರು ರಾಜಕೀಯ ರಂಗ ಪ್ರವೇಶಿಸಿ, 1972 ರಲ್ಲಿ ಶ್ರೀರಂಗಪಟ್ಟಣ ವಿಧಾನ ಸಭಾ ಕ್ಷೇತ್ರದಿಂದ ಮೊದಲ ಬಾರಿಗೆ 5ನೇ ವಿಧಾನಸಭೆಗೆ ಆಯ್ಕೆಯಾಗಿದ್ದರು. ನಂತರ 1989 ರಲ್ಲಿ 9ನೇ ವಿಧಾನಸಭೆಗೆ ಅದೇ ಕ್ಷೇತ್ರದಿಂದ ಪುನರಾಯ್ಕೆಗೊಂಡು ಸೇವೆಯನ್ನು ಸಲ್ಲಿಸಿದ್ದರು. **ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.**

**10. ಚನ್ನವೀರಯ್ಯ ಶಾಂತಯ್ಯ ಮುತ್ತಿನ ಪೆಂಡಿಮಠ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಚನ್ನವೀರಯ್ಯ ಶಾಂತಯ್ಯ ಮುತ್ತಿನಪೆಂಡಿಮಠ, ಅವರು ದಿನಾಂಕ:29.05.2019ರಂದು ನಿಧನ ಹೊಂದಿರುತ್ತಾರೆ.

ದಿನಾಂಕ:21.09.1929 ರಂದು ಗದಗದಲ್ಲಿ ಜನಿಸಿದ್ದ ಶ್ರೀಯುತರು ಬಿ.ಎಸ್ಸಿ ಮತ್ತು ಕಾನೂನು ಪದವೀಧರರಾಗಿದ್ದರು. ವೃತ್ತಿಯಲ್ಲಿ ವಕೀಲರಾಗಿದ್ದರೂ ಜನಸೇವೆ ಮಾಡಲು ರಾಜಕೀಯ ರಂಗ ಪ್ರವೇಶಿಸಿದ್ದರು. ಗದಗ ವಿಧಾನಸಭಾ ಕ್ಷೇತ್ರದಿಂದ 1978 ರಲ್ಲಿ ಪ್ರಥಮ ಬಾರಿಗೆ 6ನೇ ವಿಧಾನಸಭೆ ಪ್ರವೇಶಿಸಿದ್ದ ಅವರು ನಂತರ 1983 ರಲ್ಲಿ 7ನೇ ವಿಧಾನಸಭೆಗೆ ಪುನರ್ ಆಯ್ಕೆಗೊಂಡು ಸೇವೆಯನ್ನು ಸಲ್ಲಿಸಿದ್ದರು. 1974 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ, ಶಾಶ್ವತ ಕುಡಿಯುವ ನೀರಿನ ಯೋಜನೆಯ ರೂವಾರಿಗಳಾಗಿದ್ದ ಅವರು ಶಾಸಕರಾಗಿದ್ದ ಅವಧಿಯಲ್ಲಿಯೇ ಗದಗ ನಗರಕ್ಕೆ ತುಂಗಭದ್ರಾ ನದಿ ಮೂಲದಿಂದ ನೀರು ಪೂರೈಸುವ ಮೊದಲ ಹಂತದ ಕುಡಿಯುವ ನೀರಿನ ಯೋಜನೆಯು ಜಾರಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. **ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.**

**(...ಮುಂದು)**

(79) 12.07.2019 KG.VK 1-30

(ಸಭಾಪತಿಯವರ ಉಪಸ್ಥಿತಿ)

**11. ಡಾ: ವಿಜಯಕುಮಾರ ಖಂಡ್ರೆ**

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಡಾ: ವಿಜಯಕುಮಾರ ಖಂಡ್ರೆ ಅವರು ದಿನಾಂಕ:29.04.2019 ರಂದು ನಿಧನ ಹೊಂದಿರುತ್ತಾರೆ.

ದಿನಾಂಕ: 27.07.1957ರಂದು ಭಾಲ್ಕಿಯಲ್ಲಿ ಜನಿಸಿದ್ದ ಶ್ರೀಯುತರು ಎಂ.ಬಿ.ಬಿ.ಎಸ್. ಪದವೀಧರರಾಗಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದ ಅವರು ವೈದ್ಯರಾಗಿಯೂ ಕಾರ್ಯನಿರ್ವಹಿಸಿದ್ದರು.

ದಿವಂಗತರು 1989ರಲ್ಲಿ ಮೊದಲ ಬಾರಿಗೆ ಪಕ್ಷೇತರರಾಗಿ ಭಾಲ್ಕಿ ವಿಧಾನಸಭಾ ಕ್ಷೇತ್ರದಿಂದ 9ನೇ ವಿಧಾನ ಸಭೆಗೆ ಆಯ್ಕೆಯಾಗಿದ್ದು, ನಂತರ 10ನೇ ವಿಧಾನಸಭೆಗೆ ಪುನರಾಯ್ಕೆಗೊಂಡು ಸೇವೆಯನ್ನು ಸಲ್ಲಿಸಿದ್ದರು. **ಶ್ರೀಯುತರ ನಿಧನದಿಂದಾಗಿ ಒಬ್ಬ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ**

**12. ಗೋಪಾಲ್ ಭಂಡಾರಿ ಹೆಚ್.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಗೋಪಾಲ್ ಭಂಡಾರಿ, ಅವರು ದಿನಾಂಕ:04.07.2019 ರಂದು ನಿಧನ ಹೊಂದಿರುತ್ತಾರೆ.

ದಿನಾಂಕ: 07.07.1952ರಂದು ಕಾರ್ಕಳ ತಾಲ್ಲೂಕಿನ ಚಾರಾ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದರು. 1999 ರಲ್ಲಿ ಮೊದಲ ಬಾರಿಗೆ ಕಾರ್ಕಳ ವಿಧಾನಸಭಾ ಕ್ಷೇತ್ರದಿಂದ 11ನೇ ವಿಧಾನಸಭೆಗೆ ಆಯ್ಕೆಯಾಗಿ ನಂತರ 2008 ರಲ್ಲಿ 13ನೇ ವಿಧಾನಸಭೆಗೆ ಅದೇ ಕ್ಷೇತ್ರದಿಂದ ಪುನರಾಯ್ಕೆಗೊಂಡು ಸೇವೆಯನ್ನು ಸಲ್ಲಿಸಿದ್ದರು. **ಶ್ರೀಯುತರ ನಿಧನದಿಂದಾಗಿ ಒಬ್ಬ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ**

**13. ಶಾರದವ್ವ ಎಂ. ಪಟ್ಟಣ**

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀಮತಿ ಶಾರದವ್ವ ಎಂ.ಪಟ್ಟಣ ಅವರು ದಿನಾಂಕ:20.02.2019 ರಂದು ನಿಧನ ಹೊಂದಿರುತ್ತಾರೆ.

ಗದಗ ಜಿಲ್ಲೆಯಲ್ಲಿ ಜನಿಸಿದ್ದ ಶ್ರೀಯುತರು ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಿಂದ ಬಂದಿದ್ದು, 1942ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಮಾಜಿ ಶಾಸಕರಾಗಿದ್ದ ದಿವಂಗತ ಮಹಾದೇವಪ್ಪ ಪಟ್ಟಣ ಅವರ ಪತ್ನಿಯಾಗಿದ್ದ ಅವರು ಕರ್ನಾಟಕ ಏಕೀಕರಣಕ್ಕಾಗಿ ಹಾಗೂ ಗಡಿ ಸಂರಕ್ಷಣೆಗಾಗಿ ಸ್ಮರಣೀಯ ಸೇವೆ ಸಲ್ಲಿಸಿದ್ದರು. ರಾಮದುರ್ಗ ವಿಧಾನಸಭಾ ಕ್ಷೇತ್ರದಿಂದ 1967 ರಲ್ಲಿ 4ನೇ ವಿಧಾನ ಸಭೆಗೆ ಆಯ್ಕೆಗೊಂಡು ಸೇವೆಯನ್ನು ಸಲ್ಲಿಸಿದ್ದರು. **ಇವರ ನಿಧನದಿಂದಾಗಿ ಒಬ್ಬ ಹಿರಿಯ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ**

**14. ಡಾ: ಎನ್.ಬಿ. ನಂಜಪ್ಪ**

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಡಾ: ಎನ್.ಬಿ. ನಂಜಪ್ಪ, ಅವರು ದಿನಾಂಕ: 27.04.2019ರಂದು ನಿಧನ ಹೊಂದಿರುತ್ತಾರೆ.

ದಿನಾಂಕ: 18.12.1933 ರಂದು ಜನಿಸಿದ್ದ ಶ್ರೀಯುತರು ಎಂ.ಬಿ.ಬಿ.ಎಸ್. ಪದವೀಧರರಾಗಿದ್ದು ಕೃಷಿಕರಾಗಿದ್ದರು. ಶ್ರೀಯುತರು ವೃತ್ತಿಯಲ್ಲಿ ವೈದ್ಯರಾಗಿ ಕಾರ್ಯನಿರ್ವಹಿಸಿದ್ದರು. 1989ರಲ್ಲಿ ಶ್ರವಣ ಬೆಳಗೊಳ ಕ್ಷೇತ್ರದಿಂದ 9ನೇ ವಿಧಾನಸಭೆಗೆ ಆಯ್ಕೆಯಾಗಿ ಸೇವೆಯನ್ನು ಸಲ್ಲಿಸಿದ್ದರು. **ಶ್ರೀಯುತರ ನಿಧನದಿಂದಾಗಿ ಒಬ್ಬ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**15. ಎಂ. ಸತ್ಯನಾರಾಯಣ**

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಎಂ. ಸತ್ಯನಾರಾಯಣ ಅವರು ದಿನಾಂಕ:06.06.2019 ರಂದು ನಿಧನ ಹೊಂದಿರುತ್ತಾರೆ

ದಿನಾಂಕ:01.11.1945 ರಂದು ಮೈಸೂರಿನಲ್ಲಿ ಜನಿಸಿದ್ದ ಶ್ರೀಯುತರು ಪಿ.ಯು.ಸಿ. ವಿದ್ಯಾರ್ಹತೆ ಹೊಂದಿದ್ದು ವೃತ್ತಿಯಲ್ಲಿ ಕೃಷಿಕರಾಗಿದ್ದರು. 2008ರಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಿಂದ 13ನೇ ವಿಧಾನ ಸಭೆಗೆ ಚುನಾಯಿತರಾಗಿ ಸೇವೆಯನ್ನು ಸಲ್ಲಿಸಿದ್ದರು. **ಶ್ರೀಯುತರ ನಿಧನದಿಂದಾಗಿ ಒಬ್ಬ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ**

**16. ಸಂಭಾಜಿ ಲಕ್ಷ್ಮಣ ಪಾಟೀಲ್**

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಸಂಭಾಜಿ ಲಕ್ಷ್ಮಣ ಪಾಟೀಲ್ ಅವರು ದಿನಾಂಕ: 17.05.2019ರಂದು ನಿಧನ ಹೊಂದಿರುತ್ತಾರೆ.

ದಿನಾಂಕ: 05.12.1951ರಂದು ಬೆಳಗಾವಿಯಲ್ಲಿ ಜನಿಸಿದ್ದರು. ಅವರು 1990ರಲ್ಲಿ ಬೆಳಗಾವಿಯ ಮಹಾಪೌರರಾಗಿದ್ದ ಅವಧಿಯಲ್ಲಿ ಹಿಡಕಲ್ ಜಲಾಶಯದಿಂದ ಬೆಳಗಾವಿಗೆ ನೀರು ಹರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಬೆಳಗಾವಿ ಅಭಿವೃದ್ಧಿಯ ಚಿಂತಕರಾಗಿದ್ದ ಅವರು ಕನ್ನಡಿಗರ ಪರ ನಿಂತ ಪರಿಣಾಮ 1991ರಲ್ಲಿ ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಮೊಟ್ಟ ಮೊದಲ ಬಾರಿಗೆ ಕನ್ನಡ ಮೇಯರ್ ಅಧಿಕಾರ ಪಡೆದ ಕೀರ್ತಿಗೆ ಭಾಜನರಾಗಿದ್ದರು.

ಶ್ರೀಯುತರು ಬೆಳಗಾವಿಯ ಗಡಿ ವಿಷಯದ ಹೋರಾಟದಲ್ಲಿ ಮಂಚೂಣಿಯಲ್ಲಿದ್ದರು. 2013 ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಬೆಳಗಾವಿ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ 14ನೇ ವಿಧಾನಸಭೆ ಆಯ್ಕೆಗೊಂಡು ಸೇವೆಯನ್ನು ಸಲ್ಲಿಸಿದ್ದರು. **ಶ್ರೀಯುತರ ನಿಧನದಿಂದಾಗಿ ಒಬ್ಬ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ**

**ಡಾ॥ ಜೈಮಾಲ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಇವತ್ತಿನ ದಿವಸ ಹೊಸ ಪರಂಪರೆಗೆ ನಾಂದಿ ಹಾಕಿಕೊಟ್ಟಿದ್ದೀರಿ ಎಂದು ನಾನು ಭಾವಿಸುತ್ತೇನೆ. ಆರು ವರ್ಷಗಳ ಕಾಲ ಶಾಸಕರು ಕೇವಲ ಕ್ಷೇತ್ರ ಮಾತ್ರವಲ್ಲ, ಜನರ ಹಿತವನ್ನು ಕಾಪಾಡುವಲ್ಲಿ ಯಾವುದೇ ಶಾಸನಗಳು ಸದನಕ್ಕೆ ಬಂದಾಗ ಅದರ ಬಗ್ಗೆ ಚರ್ಚೆ ಮಾಡುವುದರ ಮೂಲಕ ಎಲ್ಲಾ ಶಾಸಕರು ಒಂದೇ ರೀತಿಯಾದಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಲೋಚನೆಯಲ್ಲಿ ಕಾರ್ಯನಿರ್ವಹಿಸುತ್ತಾರೆ. ಶಾಸಕರು ಅಗಲಿದಂತಹ ಸಂದರ್ಭದಲ್ಲಿ ಅವರಿಗೆ ಎರಡೂ ಸದನಗಳಲ್ಲಿ ಗೌರವ ಸಿಗುವಂತಾಗಬೇಕೆಂದು ಮಾನ್ಯ ಸದಸ್ಯರೆಲ್ಲರೂ ಒಕ್ಕೊರಲಿನಿಂದ ಈ ಮಾತನ್ನು ಇಲ್ಲಿ ಹೇಳಿದ್ದಾರೆ. ಆದರೆ, ಪೂರ್ವ ತಯಾರಿ ಇಲ್ಲದೆ ಅನೇಕ ಸದಸ್ಯರ ಬಗ್ಗೆ ಕಡಿಮೆ ವಾಕ್ಯಗಳನ್ನು ಹೇಳಿದರೂ ಸಹ, ನಾವು ಅವರಿಗೆ ಈ ಸದನದ ಘನತೆಯನ್ನು ಅವರು ಮಾಡಿದಂತಹ ಕೆಲಸವನ್ನು ಒಂದು ಅಕ್ಷರದಲ್ಲಿ ಗೌರವ ಸಲ್ಲಿಸುತ್ತೇವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ದಿವಂಗತ ಶ್ರೀ ಸಿ.ಎಸ್.ಶಿವಳ್ಳಿಯವರು ಸಜ್ಜನ ರಾಜಕಾರಣಿಯಾಗಿದ್ದರು. ಅವರು ಪೌರಾಡಳಿತ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಅವರು ನಮ್ಮನ್ನು ಅಗಲಿದರು. ಅವರು ಬಹಳ ಕಡಿಮೆ ಮಾತು ಆಡುತ್ತಿದ್ದರು. ಆದರೆ, ಅವರ ಆಲೋಚನೆಗಳು ಬಹಳ ದೊಡ್ಡದಾಗಿದ್ದವು. ಅವರು ಕುಂದಗೋಳದ ವಿಧಾನಸಭೆ ಕ್ಷೇತ್ರದ ಯಾವುದೇ ಸಮಸ್ಯೆ ಬಂದಾಗ, ನಿಶಬ್ದ ವಾಗಿದ್ದಂತಹವರು ಧ್ವನಿಯನ್ನು ಎತ್ತರಿಸಿ ಆ ಕ್ಷೇತ್ರದ ಸಮಸ್ಯೆಯನ್ನು ಬಗೆಹರಿಸಿ ಎಂದು ಕ್ಯಾಬಿನೆಟ್‌ನಲ್ಲಿ ಮಾತನಾಡಿದ್ದನ್ನು ಮತ್ತು ಅವರು ಕುಳಿತುಕೊಂಡಿದ್ದ ಜಾಗವನ್ನು ನಾನು ಈಗ ನೆನಪಿಸಿಕೊಳ್ಳುತ್ತೇನೆ. ಅವರಿಗೆ ಕ್ಷೀಣಿಸಿದಂತಹ ಆರೋಗ್ಯ ಇದ್ದರೂ ಸಹ, ಅವರು ಅದನ್ನು ಗಮನಕ್ಕೆ ತೆಗೆದುಕೊಳ್ಳದೇ ಜನಪರ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರು. ನನಗೆ ಅತ್ಯಂತ ಸಂತೋಷವಾಗುವಂಥದ್ದು ಏನೆಂದರೆ, ಅವರ ಧರ್ಮಪತ್ನಿಯವರು ಆ ಕ್ಷೇತ್ರದಲ್ಲಿನ ಹಳ್ಳಿಗಳಿಗೆ ಮತಯಾಚನೆಗೆ ಹೋದಾಗ, ಆ ಜನರು ಅವರ ಬಗ್ಗೆ ಮಾತನಾಡಿರುವಂಥದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಆ ಬಗ್ಗೆ ನಾನು ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಬೇಕೆಂದು ಅನಿಸುತ್ತದೆ.

ಮಾನ್ಯ ಸಭಾಪತಿಯವರೇ, ಅವರು ರೈತರ ಪರವಾಗಿ ಪಾದಯಾತ್ರೆ ಮಾಡಿದರು. ಮಹದಾಯಿ ನೀರಿಗಾಗಿ ಹೋರಾಟ ಮಾಡಿದರು. ಅವರಿಗೆ ಸಾಮೂಹಿಕ ವಿವಾಹದ ಬಗ್ಗೆ ಅತ್ಯಂತ ನಂಬಿಕೆ ಇತ್ತು. ನಾನು ಈ ಮಾತುಗಳನ್ನು ಏಕೆ ಹೇಳುತ್ತಿದ್ದೇನೆಂದರೆ, ಕುಂದಗೋಳದ ಉಪ ಚುನಾವಣೆಯಲ್ಲಿ ಅವರ ಪತ್ನಿಯವರಿಗೆ ಟಿಕೆಟ್‌ನ್ನು ನೀಡಲಾಗಿತ್ತು. ಆ ಚುನಾವಣೆಯ ಸಂದರ್ಭದಲ್ಲಿ ನಾನು ಪ್ರಚಾರಕ್ಕೆ ಕುಂದಗೋಳಕ್ಕೆ ಹೋಗಿದ್ದಾಗ ಆ ಕೇರಿಗಳಲ್ಲಿನ ಜನರು ಅತ್ಯಂತ ಭಾವುಕರಾಗುತ್ತಿದ್ದರು. ಶ್ರೀಮತಿ ಕುಸುಮಾವತಿ ಶಿವಳ್ಳಿಯವರನ್ನು ಕಂಡು ಈ ಬಿಸಿಲಿನಲ್ಲಿ ಏಕೆ ಬರುತ್ತೀರಾ, ಅವರು ನನ್ನ ಮಗನಿಗೆ ಕೆಲಸ ಕೊಟ್ಟರು, ನಮ್ಮ ತೋಟಗಳಿಗೆ ನೀರು ಕೊಟ್ಟರು, ನೀವು ಮನೆಗೆ ಹೋಗಿ ತಾಯಿ ನಾವು ನಿಮಗೆ ಮತ ಹಾಕುತ್ತೇವೆಂದು ಹೇಳುತ್ತಿದ್ದರು.

**(ಮುಂದು.,,)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(80) 12-07-2019 (1-40) ಎಲ್‌ಎಲ್/ವಿಕೆ

**ಸಭಾಪತಿಯವರ ಉಪಸ್ಥಿತಿ**

**ಡಾ॥ ಜೈಮಾಲ (ಮುಂದುವರೆದಿದ್ದು...)**

ಇದನ್ನು ಬಹುಶಃ ನಾವೆಲ್ಲರೂ ಕೂಡ ಒಂದು ಒಳ್ಳೆಯ ಕೆಲಸ ಮಾಡಿದಾಗ ಅದು ನಮ್ಮ ಸಾವಿನಲ್ಲಿ ಗೊತ್ತಾಗುತ್ತದೆ ಎನ್ನುವುದಕ್ಕೆ ಹೇಳುತ್ತಿದ್ದೇನೆ. ಜನ ನೆನಪಿಸಿಕೊಳ್ಳುವಂತಹ ಕೆಲಸಗಳನ್ನು ಅವರು ಮಾಡಿದ್ದಾರೆ. ಆದುದರಿಂದ, ಅದನ್ನು ಈ ಕ್ಷಣದಲ್ಲಿ ನಾನು ನೆನಪಿಸಿಕೊಳ್ಳುತ್ತಿದ್ದೇನೆ. ಅವರು ಒಳ್ಳೆಯ ಕೆಲಸವನ್ನು ಮಾಡಿದ್ದ ಕಾರಣ, ಶೇಕಡ 81ರಷ್ಟು ಹೆಣ್ಣುಮಕ್ಕಳು ಮತ ಚಲಾವಣೆ ಮಾಡಿದ್ದಾರೆ. ಅಂದರೆ, ಒಳ್ಳೆಯ ಕೆಲಸ ಮಾಡಿದರೆ, ಜನಪರವಾದ ಕೆಲಸವನ್ನು ಮಾಡಿದರೆ ಆ ಕೆಲಸಗಳೆಲ್ಲವೂ ಕೂಡ ನೆನಪಿನಲ್ಲಿ ಉಳಿಯುವುದಕ್ಕೆ ಇದೊಂದು ಸಾಕ್ಷಿಯಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀಯುತರು ಅನೇಕ ಕೆರೆಗಳಿಗೆ ನೀರು ತುಂಬಿಸುವಂತಹ ಯೋಜನೆ ಮಾಡಿದ್ದಾರೆ. ಬೆಣ್ಣೆಹಳ್ಳ ಕೆರೆ ಹೂಳೆತ್ತುವ ಯೋಜನೆ ಕೈಗೆತ್ತಿಗೊಂಡಿದ್ದರು. ಕುಂದಗೋಳದಲ್ಲಿ ಸುಮಾರು 8600ಕ್ಕೂ ಹೆಚ್ಚು ಜನರಿಗೆ ಸಾಲ ಮನ್ನಾವನ್ನು ಮಾಡಿಕೊಟ್ಟಿದ್ದಾರೆ. ಗೌಡಗೇರಿ ಕೆರೆ ಅಭಿವೃದ್ಧಿಯನ್ನು ಮಾಡಿದ್ದಾರೆ. ಹಲವಾರು ಕಡೆ ಅವರು ಮೇವು ಬ್ಯಾಂಕುಗಳ ಕೇಂದ್ರವನ್ನು ಸ್ಥಾಪನೆ ಮಾಡಿದ್ದಾರೆ. ಹೀಗೆ ಅನೇಕ ಜನಪರವಾದಂತಹ ಕೆಲಸವನ್ನು ಮಾಡಿದ್ದಾರೆ. ಮಂತ್ರಿಯಾಗಿ ಅಧಿಕಾರದಲ್ಲಿದ್ದಾಗಲೇ ಅವರಿಗೆ ಗೊತ್ತಿಲ್ಲದೇ ಅವರ ಆರೋಗ್ಯ ಕೆಟ್ಟು ನಮ್ಮನ್ನು ಅಗಲಿದ್ದಾರೆ. ನಾನು ಈ ಸದನದ ಪರವಾಗಿ ಅವರ ಕುಟುಂಬಕ್ಕೆ ಈ ನೋವನ್ನು ಭರಿಸುವಂತಹ ಶಕ್ತಿಯನ್ನು ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

ನಮ್ಮ ವಿಧಾನ ಪರಿಷತ್ತಿನ ಹಿರಿಯ ಸದಸ್ಯರಾಗಿದ್ದಂತಹ ಶ್ರೀಯುತರಾದ ಶ್ರೀ ಬಸಗೌಡ ಅಪ್ಪಯ್ಯಗೌಡ ಪಾಟೀಲ್‌ರವರು ಕೂಡ ಕೃಷಿಕ ಭಾಂದವರ ಮುಖಂಡರಾಗಿದ್ದವರು. ಶಿಕ್ಷಣ ಪ್ರೇಮಿಯೂ ಆಗಿದ್ದಂತಹ ಶ್ರೀಯುತರು ಶ್ರೀ ಸಂಕೇಶ್ವರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧ್ಯಕ್ಷರಾಗಿ ಮತ್ತು ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯ ಸಂಸ್ಥಾಪಕರಲ್ಲಿ ಒಬ್ಬರಾಗಿ ಅಪಾರ ಸೇವೆ ಸಲ್ಲಿಸಿದವರು. ಉತ್ತರ ಕರ್ನಾಟಕದ ಹಲವು ಸಂಘಸಂಸ್ಥೆಗಳ ಬೆಳವಣಿಗೆಯಲ್ಲಿಯೂ ಕೂಡ ಅವರ ಪಾತ್ರ ಅಪಾರವಾಗಿರುವಂಥದ್ದು, ಆ ಮಹಾನುಭಾವರಿಗೂ ಕೂಡ ತಮ್ಮೆಲ್ಲರ ಪರವಾಗಿ ನಾನು ಶ್ರದ್ಧಾಂಜಲಿಯ ನುಡಿನಮನಗಳನ್ನು ಸಲ್ಲಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್.ಎಂ. ಶಂಕರ್‌ರವರು ಬಹುಶಃ ಎಲ್ಲರಿಗೂ ಆತ್ಮೀಯರಾಗಿದ್ದರು. ಅತ್ಯಂತ ಸರಳ ಸಜ್ಜನರಾಗಿದ್ದವರು, ಅವರ ಸಾವಿನಿಂದ ಕೃಷಿ, ಸಹಕಾರ ಮತ್ತು ರಾಜಕೀಯ ಕ್ಷೇತ್ರಗಳಿಗೆ ತುಂಬಲಾರದ ಕೊರತೆಯಾಗಿದೆ. ಅವರು ಕೂಡ ವೃತ್ತಿಯಲ್ಲಿ ವ್ಯವಸಾಯಗಾರರಾಗಿದ್ದು, ರೈತರ ಹಿತಾಸಕ್ತಿಯನ್ನು ಕಾಪಾಡುವದಕ್ಕೆ ಮಂಡ್ಯ ಜಿಲ್ಲೆಯಲ್ಲಿ ಎಸ್.ಸಿ. ಮಲ್ಲಯ್ಯ ಸಕ್ಕರೆ ಕಾರ್ಖಾನೆಯ ಸಂಸ್ಥಾಪಕ ಅಧ್ಯಕ್ಷರಾಗಿದ್ದರು. ಶ್ರೀಯುತರ ಬಗ್ಗೆ ನನಗೆ ಇನ್ನೊಂದು ಒಳ್ಳೆಯ ಮಾತು ನೆನಪಿಗೆ ಬರುವಂಥದ್ದು ಎಂದರೆ, ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಬಗ್ಗೆ ಅವರಿಗೆ ಇದ್ದಂತಹ ಕಾಳಜಿಯಿಂದಲೇ ಬಹುಶಃ ಆ ಗ್ರಾಮೀಣ ಭಾಗದಲ್ಲಿ ವಿಶೇಷವಾಗಿ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಶ್ರೀ ಎಸ್.ಸಿ. ಮಲ್ಲಯ್ಯ ವಿದ್ಯಾಸಂಸ್ಥೆಯನ್ನು ಕಟ್ಟಿ ಬೆಳೆಸಿದರು. ರೈತರ ಹಿತಾಸಕ್ತಿ ಕಾಪಾಡುವಲ್ಲಿಯೂ ಮಂಚೂಣಿಯಲ್ಲಿರತಕ್ಕಂತಹ ಮಂಡ್ಯ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘದ ಒಕ್ಕೂಟದಲ್ಲಿಯೂ ಕೂಡ ಅವರು ನಿರ್ದೇಶಕರಾಗಿದ್ದರು. ಅನೇಕ ರೈತರ ಕ್ರಮಗಳನ್ನು ಮತ್ತು ನಿರ್ಧಾರಗಳನ್ನು ಅವರು ಮಾಡಿರುವಂಥದ್ದನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ಇಂತಹ ಕ್ರಿಯಾಶೀಲ, ಸಜ್ಜನ ರಾಜಕಾರಣಿಯನ್ನು ನಾವು ಕಳೆದುಕೊಂಡಿದ್ದೇವೆ. ಸದನದ ಪರವಾಗಿ ನಾನು ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇನೆ.

ಶ್ರೀ ವಿ.ಧನಂಜಯ ಕುಮಾರ್‌ರವರು ದಕ್ಷಿಣ ಕನ್ನಡ ಜಿಲ್ಲೆಯ ನನ್ನ ಊರಿನವರು. ಅವರು ನನಗೆ ಯಾವಾಗ ಸಿಕ್ಕಿದರೂ ಕೂಡ ಅತ್ಯಂತ ಗೌರವ ರೀತಿಯಿಂದ 'ಹೇಗಿದ್ದೀರಿ' ಎಂದು ಮಾತನಾಡಿಸುವಂತಹ ಸರಳ ಸಜ್ಜನಿಕೆಯನ್ನು ಇಟ್ಟುಕೊಂಡಿದ್ದಂತಹ ಒಬ್ಬ ಮುತ್ಸದ್ಧಿ ರಾಜಕಾರಣಿ. ಅವರು ಸಂಸತ್ ಸದಸ್ಯರಾಗಿ ಕೇಂದ್ರ ಸರ್ಕಾರದಲ್ಲಿ ಸಚಿವರಾಗಿ ಅನೇಕ ಖಾತೆಗಳನ್ನು ನಿಭಾಯಿಸಿದ್ದಾರೆ. ವಿಮಾನಯಾನ ಖಾತೆ ಇರಬಹುದು, ಜವಳಿ ಖಾತೆ ಇರಬಹುದು, ಹಾಗೆಯೇ ಪ್ರವಾಸೋದ್ಯಮ ಖಾತೆಗಳನ್ನು ನಿಭಾಯಿಸಿದ್ದಾರೆ. 4 ಬಾರಿ ದಕ್ಷಿಣ ಕನ್ನಡದಿಂದ ಪ್ರತಿನಿಧಿಸಿದ್ದರು. ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರಂತಹ ಮೇರು ವ್ಯಕ್ತಿತ್ವದ ಪ್ರಧಾನ ಮಂತ್ರಿಗಳ ಜೊತೆ ಕೂಡ ಅವರು ಸಂಪುಟದಲ್ಲಿ ಅತ್ಯಂತ ಯಶಸ್ವಿ ಮಂತ್ರಿಯಾಗಿ ಕೆಲಸ ಮಾಡಿ ಕರ್ನಾಟಕಕ್ಕೆ ಗೌರವ ತಂದುಕೊಟ್ಟಂತಹ ಖ್ಯಾತಿ ಅವರಿಗಿದೆ.

ಶ್ರೀಯುತರು ದಕ್ಷಿಣ ಕನ್ನಡ ಜಿಲ್ಲೆಯವರು. ಆದರೆ, ದಕ್ಷಿಣ ಕನ್ನಡದ ಭಾಗದ ಸಮಸ್ಯೆಗಳು ಮಾತ್ರವಲ್ಲದೇ, ನಮ್ಮಲ್ಲಿ ಕಾವೇರಿ ಸಮಸ್ಯೆ ಇರಬಹುದು ಅಥವಾ ಕೃಷ್ಣಾ ನದಿ ನೀರು ಹಂಚಿಕೆ ವಿವಾದಗಳು ಇರಬಹುದು, ಯಾವುದೇ ಸಮಸ್ಯೆ ಬಂದಾಗ ರಾಜ್ಯದಿಂದ ಕೇಂದ್ರ ಸರ್ಕಾರಕ್ಕೆ ಹೋದಂತಹ ನಿಯೋಗದ ಮುಖಂಡರನ್ನು ಒಂದುಗೂಡಿಸಿ ಸಮಸ್ಯೆಗಳ ಬಗ್ಗೆ ಬೆಳಕು ಹರಿಸುವಲ್ಲಿ ಮಹತ್ವವಾದ ಪಾತ್ರವನ್ನು ವಹಿಸಿದ್ದರು. ಅದನ್ನು ನಾವು ಎಂದಿಗೂ ಮರೆಯುವುದಕ್ಕೆ ಸಾಧ್ಯವಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದೇ ರೀತಿ ಇವೊತ್ತಿನ ದಿನ ಮಂಗಳೂರು ವಿಮಾನ ನಿಲ್ದಾಣ ಇರಬಹುದು, ಬೆಳಗಾವಿ ಅಥವಾ ಹುಬ್ಬಳ್ಳಿ ವಿಮಾನ ನಿಲ್ದಾಣಗಳು ಇರಬಹುದು, ಈ ಎಲ್ಲಾ ವಿಮಾನ ನಿಲ್ದಾಣಗಳ ಅಭಿವೃದ್ಧಿ ಕೆಲಸಗಳಿಗೆ ಚಾಲನೆ ಸಿಕ್ಕಿರುವುದರಲ್ಲಿ ಶ್ರೀಯುತರ ಪಾತ್ರವೂ ಕೂಡ ಇದೆ ಎನ್ನುವುದನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ಶ್ರೀಯುತರು ಕೇಂದ್ರ ಸಚಿವರಾಗಿದ್ದಾಗ ಕರ್ನಾಟಕದ ಕೊಂಡಿಯಾಗಿ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಪಕ್ಷಾತೀತವಾಗಿ ಆಲೋಚನೆ ಮಾಡುವಂತಹ ಒಬ್ಬ ಸರಳ, ಸಜ್ಜನ, ಮುತ್ಸದ್ಧಿ ಜೀವನಾನುಭವನ್ನು ಹೊಂದಿದ್ದಂತಹ ಶ್ರೀಯುತರು, ಯಾವುದೇ ವ್ಯಕ್ತಿ ಬಂದರೂ ಕೂಡ ಅವರು ಯಾವ ಪಕ್ಷದವರಾಗಿದ್ದರೂ ಕೂಡ ಎಲ್ಲಾ ಸ್ನೇಹಿತರನ್ನು ಒಳಗೊಂಡಿರತಕ್ಕಂತಹ ಒಳ್ಳೆಯ ಹೃದಯವಂತಿಕೆ ಇದ್ದಂತಹ ವ್ಯಕ್ತಿತ್ವ ಅವರದ್ದು. ಅವರು ವಿಧಿವಶರಾಗಿರುವುದು ರಾಜಕೀಯ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. ನಾನು ಸದನದ ಪರವಾಗಿ ಹಾಗೂ ಎಲ್ಲರ ಪರವಾಗಿ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇನೆ.

ಡಾ॥ ಗಿರೀಶ್ ಕಾರ್ನಾಡ್‌ರವರು ಕನ್ನಡದ ಹಾಗೂ ಕರ್ನಾಟಕದ ಹೆಸರನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗಿ ಮಿಂಚಿಸಿದಂತಹ, ಮೇರು ಪರ್ವತ. ಕನ್ನಡ ನಾಟಕ ಇರಬಹುದು ಅಥವಾ ಕನ್ನಡ ಸಿನಿಮಾ ಮತ್ತು ಪ್ರೇಕ್ಷಕರ ನಡುವೆ ಒಂದು ಅಭಿರುಚಿಯನ್ನು ತಿದ್ದಿ ತೀಡಿದಂತಹವರು, ಅದಕ್ಕೆ ಒಂದು ಹೊಸ ಹೊಳಪನ್ನು ಕೊಟ್ಟಂತವರು. ಶ್ರೀಯುತರು ಲೇಖಕರಾಗಿ, ನಾಟಕಕಾರರಾಗಿ, ರಂಗನಟನಾಗಿ, ಸಿನಿಮಾ ಕ್ಷೇತ್ರದಲ್ಲಿ ಒಬ್ಬ ಉತ್ತಮ ಅಭಿನೇತ್ರನಾಗಿ, ನಿರ್ದೇಶಕನಾಗಿ, ಕ್ರಾಂತಿಕಾರಿ ವಿಚಾರಧಾರೆಯ ನಿಷ್ಠೂರವಾದಂತಹ ನಿಲುವಿನ ಹೋರಾಟಗಾರರಾಗಿ ಕಾರ್ಯನಿರ್ವಹಿಸಿದ್ದಾರೆ. ಇವೊತ್ತಿನ ದಿವಸ ನಮ್ಮ ಕಣ್ಣು ಮುಂದೆ ಶ್ರೀಯುತರ ಸಾಧಿಸಿದಂತಹ ಸಾಧನೆಯನ್ನು ನಾವು ಲೆಕ್ಕ ಹಾಕುವುದಕ್ಕೆ ಆಗುವುದಿಲ್ಲ. ಜ್ಞಾನಪೀಠ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ಪದ್ಮಭೂಷಣಗಳಿರಬಹುದು, ಈ ಎಲ್ಲಾ ಪ್ರಶಸ್ತಿ ಪುರಸ್ಕೃತರಾದಂತಹ ಶ್ರೀಯುತರು ಆ ಎಲ್ಲಾ ಪ್ರಶಸ್ತಿಗಳನ್ನು ಮೀರಿ ಬೆಳೆದವರು ಎಂದು ನಾನು ಭಾವಿಸುತ್ತೇನೆ. ಬಹುಮುಖ ಪ್ರತಿಭೆಗೆ ಮತ್ತೊಂದು ಹೆಸರು ಇದ್ದರೆ ಅದು 'ಶ್ರೀ ಗಿರೀಶ್ ಕಾರ್ನಾಡ್' ಎಂದು ನಾವು ಹೇಳಲೇಬೇಕಾಗುತ್ತದೆ. ಇಡೀ ವಿಶ್ವವೇ ಅವರಿಗೆ ರಂಗಭೂಮಿಯಾಗಿತ್ತು, ಆದರೆ, ಅವರಿಗೆ ಮಾತ್ರ ಧಾರವಾಡವೇ ಅವರ ಪ್ರಪಂಚವಾಗಿತ್ತು. ಅವರು ಹುಟ್ಟಿದ್ದು, ಉತ್ತರಕನ್ನಡ. ಆದರೆ, ಅವರ ಪ್ರೀತಿಯಾದ ಕ್ಷೇತ್ರ ಧಾರವಾಡವಾಗಿತ್ತು. ಒಬ್ಬ ಸಾಧಕ ಇಷ್ಟೆಲ್ಲಾ ಸಾಧನೆ ಮಾಡುವವರ ಹಿಂದೆ ಯಾರಿದ್ದಾರೆಂದರೆ, ಶ್ರೀ ಗೋಕಾಕ್‌ರಂತಹವರು ಅವರಿಗೆ ಗುರುಗಳಾಗಿದ್ದರು. ಶ್ರೀ ದ.ರಾ. ಬೇಂದ್ರೆಯವರು ಅವರಿಗೆ ಮಾರ್ಗದರ್ಶಕರಾಗಿದ್ದರು. ಅನೇಕ ಸಜ್ಜನರು, ಸಾಧಕರ ಜೊತೆಯಲ್ಲಿ ಒಡನಾಟ ಇದ್ದವರು. ಆ ಒಡನಾಟದಿಂದ ಅವರು ಬೆಳೆದಂತಹ ಕ್ರಮಗಳನ್ನು ನಾವು ಆಲೋಚನೆ ಮಾಡಬಹುದು. ಕನ್ನಡ, ಇಂಗ್ಲೀಷ್, ಹಿಂದಿ, ಮರಾಠಿ, ಕೊಂಕಣಿ ಅನೇಕ ಭಾಷಾ ಪ್ರಾವಿಣ್ಯತೆ ಪಡೆದುಕೊಂಡಿದ್ದರೂ ಸಹ ಅವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಹಿತ್ಯವನ್ನು ರಚನೆ ಮಾಡುವುದಕ್ಕೆ ಆಯ್ಕೆ ಮಾಡಿಕೊಂಡಂತಹ ಭಾಷೆ ಕನ್ನಡವಾಗಿತ್ತು. ಎಲ್ಲಿಗಾದರೂ ಹೋದಾಗ, ಅವರು ನಮಗೆ ಸಿಕ್ಕಿದಾಗ ಧಾರವಾಡದ ಕಡೆಯವರು ಕನ್ನಡ ಮಾತನಾಡುವ ಭಾಷೆಯಲ್ಲಿಯೇ ಮಾತನಾಡಿಸುತ್ತಿದ್ದರು. ಕನ್ನಡ ಚಿತ್ರರಂಗದ ಮಟ್ಟಿಗಂತಲೂ ನಾವು ಅವರನ್ನು ನೆನಪಿಸಿಕೊಳ್ಳಲೇಬೇಕಾಗುತ್ತದೆ. ಕನ್ನಡ ಚಿತ್ರರಂಗ ಮರೆಯುವುದಕ್ಕೆ ಆಗದೇ ಇರುವಂತಹ ವರ್ಷ ಎಂದರೆ, ಅದು 1970 ದಶಕ. ಅದು ಸುವರ್ಣಯುಗ ಎಂದು ನಾವು ಕರೆಯುತ್ತೇವೆ.

(ಮುಂದುವರೆದಿದೆ...)

(81) 12-07-2019 1-50 ವೈಎಲ್-ಬಿಎಸ್ಎಸ್

(ಸಭಾಪತಿಯವರ ಉಪಸ್ಥಿತಿ)

ಡಾ॥ ಜೈಮಾಲ(ಮುಂದು):-

ಶ್ರೀಯುತ ಪಟ್ಟಾಭಿರಾಮರೆಡ್ಡಿಯವರು 'ಸಂಸ್ಕಾರ' ಚಿತ್ರವನ್ನು ನಿರ್ಮಾಣ ಮಾಡಬೇಕೆಂದು ಹೊರಟಾಗ ಆ ಚಿತ್ರಕಥೆಯನ್ನು ಡಾ॥ ಗಿರೀಶ್ ಕಾರ್ನಾಡ್‌ರವರಿಗೆ ನೀಡಲಾಗಿತ್ತು. ಆ ಚಿತ್ರಕಥೆಯ ಬರಹವನ್ನು ದೃಶ್ಯಕ್ಕೆ ಅಚ್ಚೊಳಿಸುವ ಕೆಲಸವನ್ನು ಅವರು ಬಹಳ ಚೆನ್ನಾಗಿ ನಿಭಾಯಿಸಿದ್ದಾರೆ. ಆ ಚಿತ್ರಕ್ಕೆ 'ಸ್ವರ್ಣ ಕಮಲ' ಪ್ರಶಸ್ತಿ ಬಂದಿದ್ದು, ಆ ಸಂದರ್ಭದಲ್ಲಿ ಅದು ಕರ್ನಾಟಕಕ್ಕೆ ಬಹಳ ದೊಡ್ಡ ಪ್ರಶಸ್ತಿಯಾಗಿತ್ತು. ಆ ಪ್ರಶಸ್ತಿ ಬಂದ ನಂತರ ಚಿತ್ರರಂಗದಲ್ಲಿ ಅನೇಕ ಬದಲಾವಣೆಗಳಾಗಿದ್ದವು. ಜೊತೆಗೆ ಆ ಚಿತ್ರದಲ್ಲಿ ಒಂದು ಪಾತ್ರವನ್ನು ಸಹ ಅವರು ನಿಭಾಯಿಸಿದ್ದರು. ಆಡಾಡುತ್ತಾ 5 ಚಿತ್ರವಾಗಿದೆ ಎಂದು ಅವರ ಆತ್ಮ ಚರಿತ್ರೆಯಲ್ಲಿ ಅವರು ಹೇಳುತ್ತಾರೆ. ಆ 5 ಚಲನಚಿತ್ರಗಳು ಕನ್ನಡ ಚಿತ್ರರಂಗಕ್ಕೆ ಎಂತಹ ಚಲನಚಿತ್ರಗಳನ್ನು ಅವರು ನೀಡಿದ್ದಾರೆ ಎಂದರೆ, ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಸುವರ್ಣ ಅಕ್ಷರಗಳಲ್ಲಿ ಬರೆದಿಡುವಂಥ ಚಿತ್ರಗಳನ್ನು ನೀಡಿದ್ದಾರೆ. 1972ರಲ್ಲಿ ಡಾ॥ ಗಿರೀಶ್ ಕಾರ್ನಾಡ್‌ರವರು ಮತ್ತು ಡಾ॥ ಬಿ.ವಿ.ಕಾರಂತರವರು ಇಬ್ಬರೂ ಜೊತೆಗೂಡಿ ಜಂಟಿಯಾಗಿ 'ವಂಶವೃಕ್ಷ' ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ಅವರಿಬ್ಬರಿಗೂ ಸಹ ಈ ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಬಂದಿದೆ. 1974ರಲ್ಲಿ 'ಕಾಡು' ಚಿತ್ರಕ್ಕೆ ಪ್ರಾದೇಶಿಕ ರಾಷ್ಟ್ರ ಪ್ರಶಸ್ತಿ ಬಂದಿತ್ತು. 1977ರಲ್ಲಿ ಶ್ರೀ ಎಸ್.ಎಲ್.ಬೈರಪ್ಪನವರ 'ತಬ್ಬಲಿಯು ನೀನಾದೆ ಮಗನೆ' ಕಾದಂಬರಿ ಆಧಾರಿತ ಚಿತ್ರಕ್ಕೂ ಸಹ ರಾಷ್ಟ್ರ ಪ್ರಶಸ್ತಿ ಬಂದಿತ್ತು. 1978ರಲ್ಲಿ ಕನ್ನಡ ಚಿತ್ರರಂಗಕ್ಕೆ ಅನರ್ಘ್ಯ ರತ್ನವನ್ನು ನೀಡಿರತಕ್ಕಂಥ, ಶ್ರೀ ಶಂಕರ್‌ನಾಗ್‌ರವರು 'ಒಂದಾನೊಂದು ಕಾಲದಲ್ಲಿ' ಚಿತ್ರದ ಮೂಲಕ ಪಾದಾರ್ಪಣೆ ಮಾಡಿದರು. ಇದನ್ನು ನಾವು ಯಾರು ಸಹ ಮರೆಯುವುದಕ್ಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗುವುದಿಲ್ಲ. ಇದರ ಕೀರ್ತಿ ಸಹ ಡಾ॥ ಗಿರೀಶ್ ಕಾರ್ನಾಡ್‌ರವರಿಗೆ ಸಲ್ಲುತ್ತದೆ. ಹಾಗೆಯೇ ಕಾನೂರು ಹೆಗ್ಗಡಿತಿ ಚಿತ್ರವು ರಾಷ್ಟ್ರಕವಿ ಕುವೆಂಪುರವರ ಬೃಹತ್ ಕಾದಂಬರಿಯನ್ನು ಆಧರಿಸಿ ಮಾಡಿರತಕ್ಕಂಥ ಚಿತ್ರವಾಗಿದ್ದು, ಡಾ॥ ಗಿರೀಶ್ ಕಾರ್ನಾಡ್‌ರವರ ಕನಸಿನ ಮತ್ತು ಮಹತ್ವಾಕಾಂಕ್ಷೆಯ ಚಿತ್ರವಾಗಿತ್ತು. ಆ ಚಿತ್ರ ತೆರೆ ಕಂಡಂತಹ ಸಂದರ್ಭದಲ್ಲಿಯೂ ಸಹ ಆಡಾಡುತ್ತಾ 5 ಚಿತ್ರಗಳನ್ನು ಮಾಡಿದ್ದೇನೆ ಎನ್ನುವಂಥ ಮಾತನ್ನು ಡಾ॥ ಗಿರೀಶ್ ಕಾರ್ನಾಡ್‌ರವರ ಆತ್ಮ ಚರಿತ್ರೆಯಲ್ಲಿಯೂ ಸಹ ಹೇಳುತ್ತಾರೆ. ಒಂದು ವಿಷಯವನ್ನು ಸದನದ ಮೂಲಕ ಹೇಳುವುದಕ್ಕೆ ಇಚ್ಛಿಸುತ್ತೇನೆ. ಡಾ॥ ಗಿರೀಶ್ ಕಾರ್ನಾಡ್‌ರವರು ಅವರ ತಂದೆಯವರ ಬಗ್ಗೆ, ಅವರ ಬಾಲ್ಯದ ಬಗ್ಗೆ ಮಾತನಾಡುತ್ತಾ, ಅವರ ತಂದೆಯವರು 1952ರಲ್ಲಿ ಧಾರವಾಡಕ್ಕೆ ಬಂದು ಬಾಡಿಗೆ ಮನೆಯಲ್ಲಿ ನೆಲೆಸಿದ್ದರು. ನಂತರ ಅದನ್ನು ಸ್ವಂತ ಮನೆಯನ್ನಾಗಿ ಮಾಡಿಕೊಂಡರು. ಈ ಸ್ವಂತ ಮನೆ ಪ್ರಸ್ತಾಪ ಏಕೆ ಹೇಳುತ್ತಾರೆಂದರೆ, ಈ ಮನೆಯಲ್ಲಿ ಮಾರ್ಚ್ 1935ರಲ್ಲಿಯೇ ಮಹಾತ್ಮ ಗಾಂಧಿಜೀಯವರು ಧಾರವಾಡಕ್ಕೆ ಬಂದಾಗ 7 ಗಂಟೆಗಳ ಕಾಲ ವಿಶ್ರಾಂತಿಯನ್ನು ಪಡೆದಿದ್ದರು. ಇಂತಹ ಮಹಾತ್ಮರು 7 ಗಂಟೆಗಳ ಕಾಲ ವಿಶ್ರಾಂತಿ ಪಡೆದುಕೊಂಡಂತಹ ಮನೆಯನ್ನು ಡಾ॥ ಗಿರೀಶ್ ಕಾರ್ನಾಡ್‌ರವರು ನೆನಪಿಸಿಕೊಂಡು ಹೇಳಿರುವುದನ್ನು ತಮ್ಮೆಲ್ಲರ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಸಾಹಿತ್ಯ ಸಂಭ್ರಮ ಅತ್ಯಂತ ಯಶಸ್ವಿಯಾಗಿ ಧಾರವಾಡದಲ್ಲಿ ನಡೆಯುತ್ತಿದೆ ಎಂದರೆ, ಅದರ ರೂವಾರಿ ಡಾ॥ ಗಿರೀಶ್ ಕಾರ್ನಾಡ್‌ರವರು ಎನ್ನುವುದನ್ನು ಮರೆಯುವುದಕ್ಕೆ ಸಾಧ್ಯವಿಲ್ಲ. ಹಾಗೆ ಧಾರವಾಡದಲ್ಲಿ ನಿರ್ಮಿಸಿರತಕ್ಕಂಥ 'ಸೃಜನ ರಂಗ ಮಂದಿರ' ಸಹ ಸಾಂಸ್ಕೃತಿಕ ಕೇಂದ್ರವಾಗಿರುವುದಕ್ಕೆ ಮೂಲ ಕಾರಣ ಡಾ॥ ಗಿರೀಶ್ ಕಾರ್ನಡ್. ಇವತ್ತು ಸಂಗೀತ ಪ್ರಿಯರಿಗೆ, ಸಾಹಿತ್ಯ ಆಸಕ್ತರಿಗೆ, ಇದೊಂದು ಆಕರ್ಷಕ ತಾಣವಾಗಿದೆ. ಅವರ ಬಗ್ಗೆ ಇನ್ನೊಂದು ಮಾತನ್ನು ಹೇಳುವುದೇನೆಂದರೆ, ಚಿತ್ರವನ್ನು ನಿರ್ಮಿಸುವುದು ದೊಡ್ಡದಲ್ಲ, ಚಿತ್ರಗಳನ್ನು ಪ್ರೇಕ್ಷಕರಿಗೆ ತಲುಪಿಸುವಂತೆ ಮಾಡುವುದು ಬಹಳ ದೊಡ್ಡದು. ಇಂತಹ ನಿಟ್ಟಿನಲ್ಲಿ ಮೊಟ್ಟ ಮೊದಲ ಬಾರಿಗೆ ಅವರು ಹುಟ್ಟು ಹಾಕಿರುವಂಥ 'ಚಿತ್ರ ಫಿಲ್ಮ್ ಸೊಸೈಟಿ' ಧಾರವಾಡದಲ್ಲಿ ಇವತ್ತಿಗೂ ಸಹ ಜೀವಂತವಾಗಿ ಇದೆ. ಎಲ್ಲಾ ಅತ್ಯುತ್ತಮ ಚಿತ್ರಗಳು ಸಿನಿಮಾ ಆಸಕ್ತರಿಗೆ, ಸದಭಿರುಚಿಯ ಚಿತ್ರವನ್ನು ನೋಡುವಂಥ ಆಸಕ್ತರಿಗೆ ಆ ಫಿಲ್ಮ್ ಸೊಸೈಟಿಯ ಮೂಲಕ ಒಂದು movement ಅನ್ನು ಬೆಳೆಸಿದಂಥ ಮಹಾನ್ ಚೇತನ ಡಾ॥ ಗಿರೀಶ್ ಕಾರ್ನಾಡ್‌ರವರು. ಅವರ ಅಗಲಿಕೆಯ ನೋವನ್ನು ಭರಿಸುವಂಥ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲಿ ಎಂದು ಕೇಳಿಕೊಳ್ಳುತ್ತೇನೆ.

ಮಾಸ್ಟರ್ ಹಿರಣ್ಣಯ್ಯನವರು 'ನಟರತ್ನಾಕರ' ಎಂಬ ಹೆಸರಿನಿಂದ ಪ್ರಖ್ಯಾತರಾಗಿದ್ದು, ಅಂತಹ ಒಳ್ಳೆಯ ಮಾತುಗಾರ, ಬುದ್ಧಿವಂತ, ಪಾಂಡಿತ್ಯ ಪಡೆದಿರುವಂಥವರು ಬಹುಶಃ ಹುಟ್ಟುವುದೇ ಕಷ್ಟ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರು ನಮ್ಮಲ್ಲಿ ನಡೆಯುವಂಥ ಆಗು-ಹೋಗುಗಳನ್ನು ಹಾಸ್ಯದ ಮೂಲಕ, ನಟನೆಯ ಮೂಲಕ, ಭಾಷೆಯ ಮುಖಾಂತರ ಜನರನ್ನು ತಿದ್ದಿ ತೀಡುವಂಥ ಕೆಲಸವನ್ನು ಮಾಡಿದ್ದಾರೆ. ಮಹಾನ್ ಅಭಿಜಾತ ಕಲಾವಿದ ಎಂದೇ ಹೇಳಬಹುದು. ಇವತ್ತಿನ ದಿವಸ 'Cultured Comedian' ಎನ್ನುವಂಥ ಬಿರುದು ಬಂದಿದೆ. ಯಾವತ್ತು ಸಹ ಅವರು ಒಂದು ಹಂತವನ್ನು ದಾಟಿ ಹೋದವರಲ್ಲ. ಆದರೆ, ಇವತ್ತು ನಾವು ಮಾಸ್ಟರ್ ಹಿರಣ್ಣಯ್ಯನವರನ್ನು ನೆನಸಿಕೊಳ್ಳಬೇಕಾದ ವಿಚಾರವೇನೆಂದರೆ, ಯಾರನ್ನು ಹಾಸ್ಯದ ಮೂಲಕ ಟಾರ್ಗೆಟ್ ಮಾಡುತ್ತಾರೆಯೋ, ಅವರನ್ನು ಆ ಒಂದು ನಾಟಕ ನಡೆಯುವಂಥ ಸಂದರ್ಭದಲ್ಲಿ ಕರೆದು ಕೂರಿಸಿ, ಅವರ ಬಗ್ಗೆ ಮಾತನಾಡಿ ಅವರನ್ನು ಸಹ ವೇದಿಕೆಗೆ ಕರೆದು ಅವರಿಗೂ ಒಂದು ಅವಕಾಶ ನೀಡುತ್ತಿದ್ದರು. ಪ್ರತಿಯೊಬ್ಬ ರಾಜಕಾರಣಿ, ನ್ಯಾಯಾಧೀಶರು, ವಕೀಲರು, ಪೊಲೀಸ್ ಅಧಿಕಾರಿಗಳಿಗೆ ವೇದಿಕೆಯನ್ನು ಸೃಷ್ಟಿ ಮಾಡುತ್ತಿದ್ದರು. ಏಕೆಂದರೆ, 10 ಸಾವಿರ ಶೋ ಗಳನ್ನು ಅವರು ಮಾಡಿದ್ದಾರೆ. ಬಹುಶಃ 'ಲಂಚಾವತಾರ' 10 ಸಾವಿರಕ್ಕೂ ಹೆಚ್ಚಿನದಾಗಿದೆ. ಇಡೀ ಭಾರತವನ್ನು ಅವರು ಸುತ್ತಿದ್ದಾರೆ. ಒಂದು ನಾಟಕವು 10 ಸಾವಿರಕ್ಕೂ ಹೆಚ್ಚಿನ ಪ್ರದರ್ಶನಗಳನ್ನು ಮಾಡಿ ದಾಖಲೆಯನ್ನು ಸೃಷ್ಟಿಸಿದಂಥ ಮಹಾನ್ ಕಲಾವಿದರಾದ ಇವರು ಇಂದು ನಮ್ಮ ಜೊತೆಯಲ್ಲಿಲ್ಲ. ಅವರು ಇರುವಷ್ಟು ಕಾಲ ಸಹ ಆ ಕ್ಷೇತ್ರವನ್ನು ಬೆಳೆಸಿದಂಥವರು. ಈ ಕಾರಣಕ್ಕಾಗಿಯೇ 'Cultured Comedian' ಎನ್ನುವಂಥ ಬಿರುದು ಸಹ ಅವರಿಗೆ ದೊರೆತಿದೆ. ಇವರ ಬಗ್ಗೆ ತಾವೂ ಸಹ ಅನೇಕ ಮಾತುಗಳನ್ನು ಹೇಳಿದ್ದೀರಿ. ಅವರ ನಾಟಕಗಳಾಗಲಿ, ಕಿರುತೆರೆಯಲ್ಲಿ, ಹಿರಿತೆರೆಯಲ್ಲಿ ನಟಿಸಿರುವುದಲ್ಲದೆ ಅನೇಕ ಸಮಾರಂಭಗಳಿಗೆ ಹೋಗಿ ಅನೇಕರನ್ನು ರಂಜಿಸಿ, ಬದುಕಿನಲ್ಲಿ ಎಲ್ಲರೂ ಖುಷಿ-ಖುಷಿಯಾಗಿರುವುದಕ್ಕೆ ಏನೇನು ಕಾರಣ ಬೇಕು ಅವರ ಬದುಕಿಗೆ ಮಾರ್ಗದರ್ಶನ ಮಾಡುವಂಥ ಕೆಲಸವನ್ನು ಅವರು ಮಾಡಿದ್ದಾರೆ. ಅವರ ಬಗ್ಗೆ ನನಗೆ ಇರುವಂಥ ಹೆಮ್ಮೆ ಎಂದರೆ, ಹೆಣ್ಣಿನ ಬಗ್ಗೆ ಒಂದು ಪ್ರಶ್ನೆ ಕೇಳುತ್ತಾರೆ. ಅದೇನೆಂದರೆ, 'ಹೆಣ್ಣು' ಎಂದರೆ ಏನು? ಆಗ ಅವರು ಒಂದು ಮಾತನ್ನು ಹೇಳುತ್ತಾರೆ. 'ಹೆಣ್ಣು ಎಂದರೆ, ಆಕೆ ತೀರಿಸಲಾಗದ ಋಣ' ಎಂದು ಹೇಳುತ್ತಾರೆ. ಆ ಒಂದು ಪದದಲ್ಲಿ ಇಡೀ ಸೃಷ್ಟಿಯ ರಹಸ್ಯವನ್ನು ಹೇಳಿದ್ದಾರೆ. ಹೆಣ್ಣು ಎಂದರೆ ಆಕೆ ತಾಯಿಯಾಗಿ, ಪತ್ನಿಯಾಗಿ, ಮಗಳಾಗಿ ಈ ಸಮಾಜದಲ್ಲಿ ಆಕೆಯ ಕೊಡುಗೆ ಏನೆಂಬುದನ್ನು ಎರಡಕ್ಷರಗಳಲ್ಲಿಯೇ ಹೇಳಿರುವಂಥ ಪುಣ್ಯಾತ್ಮ ಅವರು. ಅವರ ನಿಧನವು ಪದಗಳಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ, ಅವರ ನಿಧನ ಈ ನಮ್ಮ ನಾಡಿಗೆ ಅಂಥ ಒಬ್ಬ ಹೆಸರಾಂತ ನಾಟಕಕಾರ, ರಂಗಕರ್ಮಿಯನ್ನು ನಾವು ಇಂದು ಚಲನಚಿತ್ರ, ಕಿರುತೆರೆಯ ಕಲಾವಿದರನ್ನು ಕಳೆದುಕೊಂಡಿದ್ದೇವೆ. ಈ ಸದನದ ಪರವಾಗಿ, ಎಲ್ಲರ ಪರವಾಗಿ ಅವರಿಗೆ ನಮನವನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಧ್ಯಾಹ್ನ ಕರೆ ಮಾಡಿ ಹಿಂದಿನ ರಾತ್ರಿ 12.05ಕ್ಕೆ ಮಾನ್ಯ ಗೋಪಾಲ್ ಭಂಡಾರಿರವರು ನಿಧನ ಹೊಂದಿರುವ ಮಾತನ್ನು ಕೇಳಿದಾಗ ಬಹಳ ದುಃಖವಾಗಿತ್ತು. ಯಾವತ್ತು ಸಹ ಯಾರಿಂದಲೂ ಯಾವುದಕ್ಕೂ ಕೈಚಾಚದೇ ಬೆಳೆದಂಥ ವ್ಯಕ್ತಿತ್ವ ಅವರದಾಗಿತ್ತು. ಅತ್ಯಂತ ಸರಳ-ಸಜ್ಜನ, ಅಜಾತಶತ್ರು ಎಂದು ಹೇಳುವುದಕ್ಕೆ ಬಯಸುತ್ತೇನೆ. ಅವರು ಎಲ್ಲರನ್ನೂ ಪ್ರೀತಿಸುವಂಥ ಮನೋಭಾವವನ್ನು ಹೊಂದಿದ್ದರು. ಇಂತಹ ರಾಜಕಾರಣಿ ನಿಜಕ್ಕೂ ಬೇಕೆಂದು ನಾವು ಏತಕ್ಕೆ ಬಯಸುತ್ತೇವೆಂದರೆ, ಇವತ್ತಿನ ಸ್ಥಿತಿಯಲ್ಲಿ ಅವರೆಲ್ಲರೂ ನಮಗೆ ಬೇಕಾಗುತ್ತಾರೆ. ಯಾರಿಗೂ ನೋಯಿಸದಂಥ ವ್ಯಕ್ತಿತ್ವ ಅವರದಾಗಿತ್ತು. ತಾನು ಏನು ಮಾಡಿಕೊಂಡಿದ್ದೇನೆ ಎನ್ನುವ ಭಾವನೆಯೇ ಅವರಿಗೆ ಇರಲಿಲ್ಲ. ಅವರ ಬಗ್ಗೆ ಇರುವಂಥ ಹೆಮ್ಮೆಯ ಮಾತೆಂದರೆ, ಪ್ರತಿಯೊಂದು ಚುನಾವಣೆಯಲ್ಲಿ ಸಹ ಅವರ ಇದ್ದ-ಬದ್ದ ಆಸ್ತಿಗಳೆಲ್ಲಾ ಕರಗುತ್ತಾ ಹೋಗುತ್ತಿರುವುದನ್ನು ಕೇಳಿದ್ದೇವೆ. ಆದರೂ ಕೂಡಾ ಆ ಪುಣ್ಯಾತ್ಮ ಯಾವುದಕ್ಕೂ ಅಂಜುತ್ತಾ ಇರಲಿಲ್ಲ. ಉಸಿರಿರುವವರೆಗೂ ಇದೇ ನಮ್ಮ ಹೋರಾಟ, ಇಲ್ಲೇ ಇದ್ದು ಬೆಳೆಯುತ್ತೇನೆ ಎನ್ನುವಂಥ ಒಂದು ಸಂಕಲ್ಪ, ಯಾರನ್ನೂ ಸಹ ದ್ವೇಷಿಸದಂಥ ವ್ಯಕ್ತಿತ್ವವುಳ್ಳವರು, ಬಸ್ಸಿನಲ್ಲಿ ಏಕಾಂಗಿಯಾಗಿ ಸಂಚರಿಸುತ್ತಿದ್ದಾಗ ಯಾವ ಹೊತ್ತಿನಲ್ಲಿ ಅವರ ಪ್ರಾಣ ಹೋಗಿದೆ ಎಂಬುದು ಯಾರಿಗೂ ಗೊತ್ತಿಲ್ಲ. ಇವತ್ತು ನಾವೆಲ್ಲರೂ ಸಹ ಅವರನ್ನು ಕಳೆದುಕೊಂಡಿದ್ದೇವೆ.

(ಮುಂದು) . . .

(82) 12-07-2019 2-00 ಎಸ್‌ಕೆ-ಬಿಎಸ್‌ಎಸ್

(ಸಭಾಪತಿಯವರ ಉಪಸ್ಥಿತಿ)

**ಡಾ॥ ಜೈಮಾಲ್ಯ (ಮುಂದು):-** ಅವರ ಒಡನಾಟದಲ್ಲಿರುವಂತಹ ಅನೇಕರು ನಮ್ಮೊಳಗೆ ಇದ್ದಾರೆ. ಇವತ್ತಿನ ದಿನ ಅವರು ವಿಧಿವಶವಾಗಿರುವಂತಹದ್ದು, ನಮಗೆಲ್ಲರಿಗೂ ಅತ್ಯಂತ ನೋವಾಗಿದೆ. ಅವರ ಕುಟುಂಬಕ್ಕೆ ದುಃಖವನ್ನು ಸಹಿಸುವಂತಹ ಶಕ್ತಿ ಕೊಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀಯುತ ಕೆ.ಎಲ್. ಶಿವಲಿಂಗೇಗೌಡರವರು ಹಿರಿಯ ತಲೆಮಾರಿನ ರಾಜಕಾರಣಿಯಾಗಿದ್ದರು. ಅವರು ಸ್ವಾತಂತ್ರ್ಯ ಹೋರಾಟದಲ್ಲಿಯೂ ಸಹ ಭಾಗವಹಿಸಿದ್ದರು. ಅವರು ಸದಾ ನಡೆ-ನುಡಿಯಲ್ಲಿಯೂ ಕೂಡ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಆಚರಿಸುತ್ತಿದ್ದರು ಮತ್ತು ಅನುಸರಿಸುತ್ತಿದ್ದರು ಹಾಗೂ ನಮಗೆಲ್ಲರಿಗೂ ಕೂಡ ಮಾರ್ಗದರ್ಶಿಯಾಗಿದ್ದರು. ಅವರಿಗೂ ಕೂಡ ಈ ಸಂತಾಪ ಸೂಚನೆಯಲ್ಲಿ ನುಡಿ-ನಮನಗಳನ್ನು ನಾನು ಸಲ್ಲಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಎಸ್.ಎಸ್ ಅರಕೇರಿ (ಸಿದ್ಧಾರ್ಥ ಸಂಗಪ್ಪ ಅರಕೇರಿ)ಯವರು ಅತ್ಯಂತ ಹಿಂದುಳಿದ ಪ್ರದೇಶವಾದ ವಿಜಯಪುರ ಭಾಗದವರು. ಅವರು ಉತ್ತರ ಕರ್ನಾಟಕದ ಸಮಸ್ಯೆಗಳಿಗೆ ಸ್ಪಂದಿಸುತ್ತಾ, ಶಾಸನ ಸಭೆಗಳಲ್ಲಿಯೂ ಕೂಡ ಈ ಬಗ್ಗೆ ಗಮನ ಸೆಳೆದಿರುವಂತಹವರು. ಇವರ ನಿಧನದಿಂದ ಮೌಲ್ಯಧಾರಿತವಾದಂತಹ ಹಿರಿಯ ಒಬ್ಬ ರಾಜಕಾರಣಿಯನ್ನು ನಾವು ಕಳೆದುಕೊಂಡಿದ್ದೇವೆ.

ಶ್ರೀಮತಿ ದಮಯಂತಿ ಬೋರೇಗೌಡರವರು 1970 ರ ದಶಕದಲ್ಲಿ ಬಹುಶಃ ಅವರ 42ನೇ ವಯಸ್ಸಿನಲ್ಲಿ ರಾಜಕೀಯ ರಂಗ ಪ್ರವೇಶ ಮಾಡಿರುವಂತಹದ್ದು. ಹೆಣ್ಣು ಮಕ್ಕಳು ಮನೆಯಿಂದ ಹೊರಗೆ ಬರದೇ ಇರುವಂತಹ ಕಾಲದಲ್ಲಿಯೂ ಕೂಡ ಶ್ರೀಮತಿ ದಮಯಂತಿ ಬೋರೇಗೌಡರು ರಾಜಕೀಯ, ಸಮಾಜ ಸೇವೆ ಕ್ಷೇತ್ರಗಳಿಗೆ ಧುಮುಕಿ ಶಾಸಕಿಯಾಗಿ ಎರಡು ಬಾರಿ ಗೆದ್ದಿದ್ದು ಅಷ್ಟೊಂದು ಸುಲಭವಲ್ಲ. ಅವರನ್ನು ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಚನ್ನವೀರಯ್ಯ ಶಾಂತಯ್ಯ ಮುತ್ತಿನ ಪೆಂಡಿಮಠರವರು ಕಾನೂನು ಪದವೀಧರರು ಹಾಗೂ ವೃತ್ತಿಯಲ್ಲಿ ವಕೀಲರಾಗಿದ್ದಂತಹವರು. ಶ್ರೀಯುತರು ಸರಳ ಸಜ್ಜನಿಕೆಯ ರಾಜಕಾರಣಿಯಾಗಿದ್ದಂತಹವರು. ಗದಗ ನಗರಕ್ಕೆ ತುಂಗಭದ್ರಾ ನದಿ ಮೂಲದಿಂದ ನೀರು ಪೂರೈಸುವ ಮೊದಲ ಹಂತದ ಕುಡಿಯುವ ನೀರಿನ ಯೋಜನೆಯನ್ನು ಜಾರಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರು ಸೆನೆಟ್ ಸದಸ್ಯರಾಗಿದ್ದರು. ಅವರ ಅಗಲಿಕೆಯು ನಮಗೆಲ್ಲರಿಗೂ ನೋವು ತಂದಿದೆ. ಈ ಸಂದರ್ಭದಲ್ಲಿ ಶ್ರೀಯುತರನ್ನು ನೆನಪಿಸಿಕೊಳ್ಳುವುದಕ್ಕೆ ನಾವು ಇಷ್ಟಪಡುತ್ತೇನೆ.

ಡಾ॥ ವಿಜಯಕುಮಾರ ಖಂಡ್ರೆರವರು ಬಾಲ್ಕಿಯಲ್ಲಿ ಜನಿಸಿದ್ದರು. ಶ್ರೀ ಈಶ್ವರ್ ಖಂಡ್ರೆ ಯವರು ಶ್ರೀಯುತರ ಸಹೋದರರಾಗಿರುವಂತಹವರು. ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಗಾಗಿ ಶ್ರೀ ಖಂಡ್ರೆಯವರ ಮನೆತನವು ತುಂಬಾ ಕೊಡುಗೆಯನ್ನು ಕೊಟ್ಟಿರುತ್ತದೆ, ನಮ್ಮ ಮೇಲ್ಮನೆ ಮತ್ತು ಕೆಳಮನೆ ಅವರನ್ನು ಕಳೆದುಕೊಂಡಿದೆ.

ಶ್ರೀಮತಿ ಶಾರದವ್ವ ಎಂ. ಪಟ್ಟಣರವರು 1942ರಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಂತಹ ತಾಯಿ. ಶ್ರೀಯುತರು ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಿಂದ ಬಂದಂತಹವರು. ಮಾಜಿ ಶಾಸಕರಾಗಿದ್ದ ದಿವಂಗತ ಮಹಾದೇವಪ್ಪ ಪಟ್ಟಣರವರ ಪತ್ನಿಯಾಗಿದ್ದರು. ಅವರು ಕರ್ನಾಟಕ ಏಕೀಕರಣಕ್ಕಾಗಿ ಹಾಗೂ ಗಡಿ ಸಂರಕ್ಷಣೆಗಾಗಿ ಸ್ಮರಣೀಯವಾಗಿ ಸೇವೆ ಸಲ್ಲಿಸಿದ್ದರು. ಇವರ ಅಗಲಿಕೆಯು ತುಂಬಲಾರದ ನಷ್ಟವನ್ನು ಉಂಟು ಮಾಡಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ॥ ಎನ್.ಬಿ. ನಂಜಪ್ಪನವರು ವೃತ್ತಿಯಲ್ಲಿ ವೈದ್ಯರು ಮತ್ತು ಕೃಷಿಕರಾಗಿದ್ದರು. ಶ್ರೀಯುತರು ಶ್ರವಣಬೆಳಗೊಳ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದರು. ಅವರ ನಿಧನ ನಮಗೆಲ್ಲರಿಗೂ ಕೂಡ ಭರಿಸಲಾರದ ನಷ್ಟವನ್ನು ತಂದುಕೊಟ್ಟಿದೆ.

ಶ್ರೀ ಎಂ. ಸತ್ಯನಾರಾಯಣರವರು ಮೈಸೂರಿನಲ್ಲಿ ಜನಿಸಿದವರು. ವೃತ್ತಿಯಲ್ಲಿ ಕೃಷಿಕರಾಗಿದ್ದಂತಹವರು ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾಗಿದ್ದರು. ಶ್ರೀಯುತರು ಸರಳ ಸಜ್ಜನಿಕೆಯ ರಾಜಕಾರಣಿಯಾಗಿದ್ದರು. ಇವರ ಅಗಲಿಕೆಯು ನಮಗೆಲ್ಲರಿಗೂ ಕೂಡ ದುಃಖವನ್ನು ತಂದಿದೆ.

ಶ್ರೀ ಸಂಭಾಜಿ ಲಕ್ಷ್ಮಣ ಪಾಟೀಲ್‌ರವರು ಬೆಳಗಾವಿಯಲ್ಲಿ ಜನಿಸಿದ್ದರು. ಬೆಳಗಾವಿಯ ಮಹಾಪೌರರಾಗಿದ್ದ ಅವಧಿಯಲ್ಲಿ ಹಿಡಕಲ್ ಜಲಾಶಯದಿಂದ ಬೆಳಗಾವಿಗೆ ನೀರು ಹರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಬೆಳಗಾವಿಯ ಅಭಿವೃದ್ಧಿಯ ಚಿಂತಕರು ಮತ್ತು ಕನ್ನಡಿಗರ ಪರ ನಿಂತು ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಮೊಟ್ಟ ಮೊದಲ ಬಾರಿಗೆ ಕನ್ನಡ ಮೇಯರ್ ಅಧಿಕಾರ ಪಡೆದ ಕೀರ್ತಿಗೆ ಭಾಜನರಾಗಿದ್ದರು. ಶ್ರೀಯುತರು ಬೆಳಗಾವಿಯ ಗಡಿ ವಿಷಯದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದರು.

ಈ ಎಲ್ಲಾ ಮಹಾನುಭಾವರು ತಮ್ಮ ಜೀವನವನ್ನು ಗಂಧದ ಹಾಗೆ ತೇಯ್ದಂತಹವರು. ಅವರೆಲ್ಲರೂ ತಮಗೆ ಅರಿವಿಲ್ಲದೆ ಶ್ರಮಿಸಿದಂತಹ ಮಹಾನುಭಾವರು. ಅವರೆಲ್ಲರಿಗೂ ಕೂಡ ನಮ್ಮ ಸದನದ ಸದಸ್ಯರ ಪರವಾಗಿ ನುಡಿ-ನಮನ ಮತ್ತು ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

**ಸಭಾಪತಿಯವರು:-** ಈಗ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಮಾತನಾಡುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮೊನ್ನೆ ತಾನೇ ನಿಧನರಾಗಿರುವಂತಹ ಶ್ರೀ ಸಿ.ಎಸ್. ಶಿವಳ್ಳಿ ಯವರಿಂದ ಶ್ರೀ ಸಂಭಾಜಿ ಲಕ್ಷ್ಮಣ ಪಾಟೀಲ್‌ರವರೆಗೆ ಒಟ್ಟು ಹದಿನಾರು ಜನ ಪ್ರತಿನಿಧಿಗಳು ಮತ್ತು ಗಣ್ಯರನ್ನು ಗಮನದಲ್ಲಿಟ್ಟುಕೊಂಡು ಈ ದಿನ ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ. ಅದಕ್ಕೆ ನಾನು ಸಹಮತವನ್ನು ವ್ಯಕ್ತಪಡಿಸಿ, ಬಹುಶಃ ಪ್ರಥಮಬಾರಿಗೆ ವಿಧಾನಸಭಾ ಸದಸ್ಯರನ್ನು ಈ ಸದನದಲ್ಲಿ ನೆನಪಿಸಿಕೊಳ್ಳುವಂತಹ ಕಾರ್ಯಕ್ರಮಕ್ಕೆ ತಾವು ಚಾಲನೆ ಕೊಟ್ಟಿದ್ದೀರಿ. ಆ ಕಾರಣಕ್ಕಾಗಿ, ನಾನು ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. ತಮ್ಮ ಅಭಿಪ್ರಾಯಕ್ಕೆ ನಮ್ಮೆಲ್ಲರ ಸರ್ವಾನುಮತದ ಒಪ್ಪಿಗೆಯಿದೆ. ಅದೇ ರೀತಿಯಾಗಿ ಮೇಲ್ಮನೆಯ ಸದಸ್ಯರ ಬಗ್ಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹ ಕೆಳಮನೆಯಲ್ಲಿ ಈ ಸಂಪ್ರದಾಯವನ್ನು ಮುಂದುವರೆಸುವುದಕ್ಕೆ ಮಾನ್ಯ ಸಭಾಧ್ಯಕ್ಷರ ಜೊತೆ ಮಾತನಾಡಬೇಕು ಎನ್ನುವಂತಹ ವಿನಂತಿಯನ್ನು ಮಾಡುತ್ತೇನೆ. ಶ್ರೀ ಸಿ.ಎಸ್. ಶಿವಳ್ಳಿಯವರು ಶಾಸಕರಾಗಿ ಮತ್ತು ಮಂತ್ರಿಯಾಗಿ ಕೆಲಸವನ್ನು ನಿರ್ವಹಿಸಿದ್ದಂತಹವರು. ಈ ವಿಷಯ ನನಗೆ ಹೇಗೆ ತಿಳಿಯಿತು ಎಂದರೆ, ಮೊನ್ನೆ ಕುಂದಗೋಳ ಕ್ಷೇತ್ರದಲ್ಲಿ ನಡೆದಂತಹ ಉಪ ಚುನಾವಣೆಯಲ್ಲಿ ನಾನು ಭಾಗವಹಿಸಿದ್ದೆ. ಅನೇಕರು ರಾಜಕಾರಣವನ್ನು ಮರೆತು ಶ್ರೀಯುತರ ಒಳ್ಳೆಯತನದ ಬಗ್ಗೆ, 1999 ರಲ್ಲಿ ಕುಂದಗೋಳ ವಿಧಾನಸಭೆ ಕ್ಷೇತ್ರದಿಂದ ಅವರು ಪಕ್ಷೇತರ ಅಭ್ಯರ್ಥಿಯಾಗಿ ಗೆಲುವು ಸಾಧಿಸಿರುವ ಬಗ್ಗೆ ಹಾಗೂ ಅವರ ಬದುಕಿನುದ್ದಕ್ಕೂ ಕೂಡ ಸಾಮಾನ್ಯ ಜನರ ಪರವಾಗಿ ಕೆಲಸ ಮಾಡಿರುವ ವಿಷಯದ ಬಗ್ಗೆ ಹೇಳಿದ್ದನ್ನು ನಾನು ಕೇಳಿದ್ದೆನು. ಜನ ಪರವಾದ ನಿಲುವನ್ನು ಅವರು ಹೊಂದಿದ್ದರು. ಸಾಮಾನ್ಯ ಜನರ ನೋವಿಗೆ ಸ್ಪಂದನೆ ಮಾಡುತ್ತಿದ್ದರು. ಅಂತಹ ಒಬ್ಬ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಿದ್ದೇವೆ ಎಂಬ ನೋವು ನಮಗೆ ಇದೆ. ಅವರ ಆತ್ಮಕ್ಕೆ ಪರಮಾತ್ಮ ಚಿರಶಾಂತಿಯನ್ನು ಕರುಣಿಸಲಿ ಎಂದು ಹೇಳಿ, ಈ ಸಂದರ್ಭದಲ್ಲಿ ಈ ವಿಷಯ ಮಂಡನೆ ಮಾಡಿದ್ದಕ್ಕೆ ತಮಗೆ ನನ್ನ ಸಹಮತಿಯನ್ನು ಕೊಡುತ್ತೇನೆ.

ತಾವು ಉಲ್ಲೇಖಿಸಿರುವಂತೆ ಹಿರಿಯ ಗಾಂಧಿವಾದಿ, ಸಹಕಾರಿ ಧುರೀಣ, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಬಸಗೌಡ ಅಪ್ಪಯ್ಯಗೌಡ ಪಾಟೀಲ್‌ರವರು ನಿಧನರಾಗಿದ್ದಾರೆ. ವಿಶೇಷವಾಗಿ ದಾಖಲೆಗಳನ್ನು ಗಮನಿಸಿದರೆ, ಶ್ರೀಯುತರ ಅವಧಿಯಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯ ಬಗ್ಗೆ ಸಬಲೀಕರಣ ಮಾಡುವುದಕ್ಕೆ ಒಂದಿಷ್ಟು ಕೆಲಸಗಳನ್ನು ಮಾಡಿದ್ದಾರೆ ಎನ್ನುವಂತಹ ಮಾಹಿತಿಗಳು ಸಿಗುತ್ತವೆ. ಶ್ರೀಯುತರು ಆವೊತ್ತಿನ ದಿವಸಗಳಲ್ಲಿ ಸ್ವಾತಂತ್ರ್ಯ ಚಳುವಳಿ ನೇತೃತ್ವವನ್ನು ವಹಿಸಿದ್ದರು ಹಾಗೂ ಕರ್ನಾಟಕ ಏಕೀಕರಣದ ಹೋರಾಟದಲ್ಲಿ ಪರಿಣಾಮಕಾರಿಯಾಗಿ ಕೆಲಸವನ್ನು ಮಾಡಿದ್ದರು. ರಾಜಕಾರಣಿಗಳಿಗೆಲ್ಲಾ ಪ್ರಶಸ್ತಿ ಸಿಗುವುದು ಕಡಿಮೆ. ಆದರೆ ಶ್ರೀಯುತರು 'ಸಹಕಾರ ಶಿಲ್ಪಿ' ಪ್ರಶಸ್ತಿಗೆ ಭಾಜನರಾಗಿದ್ದರು. ಒಬ್ಬ ಶ್ರೇಷ್ಠ ಗಾಂಧಿವಾದಿ ಎಂದು ಅವರನ್ನು ಕರೆಯಲಾಗುತ್ತದೆ. ಅಂತಹ ಹಿರಿಯ ಧುರೀಣರನ್ನು ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ನೆನಪಿಸಿಕೊಳ್ಳುತ್ತೇನೆ.

ಮೊದಲನೆಯದಾಗಿ, ಶ್ರೀ ಎಸ್. ಎಂ. ಶಂಕರ್‌ರವರನ್ನು ತಾವು ಉಲ್ಲೇಖ ಮಾಡಿದ್ದೀರಿ. ಹಿಂದೆ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿದ್ದರು. ಇವರು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಮೂಲಕ ಸಹಕಾರಿ ಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಕೆಲಸವನ್ನು ಮಾಡಿದಂತಹ ಕೀರ್ತಿಗೆ ಪಾತ್ರರಾಗಿದ್ದಾರೆ. ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ಮೂಲಕ ಈ ಸದನವನ್ನು ಪ್ರತಿನಿಧಿಸಿದಂತಹವರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗೆ ಕೆಲಸವನ್ನು ಮಾಡಿದ್ದರೆಂಬ ಕೀರ್ತಿಗೆ ಶ್ರೀಯುತರು ಪಾತ್ರರಾಗಿದ್ದಾರೆ. ಶ್ರೀಯುತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ತಮ್ಮ ಮೂಲಕ ಕೋರುತ್ತೇನೆ.

(ಮುಂದು...)

(083)12.07.2019,2.10,ಟಿಸಿಹೆಚ್(ಕೆಜಿ)-ಕೆಎಸ್

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೋಟ ಶ್ರೀನಿವಾಸಪೂಜಾರಿ (ಮುಂದು)**

ಶ್ರೀ ವಿ.ಧನಂಜಯಕುಮಾರ್‌ರವರು ದಕ್ಷಿಣ ಕನ್ನಡ ಕ್ಷೇತ್ರದಿಂದ ನಾಲ್ಕು ಬಾರಿ ಲೋಕಸಭಾ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿದ್ದರು. ಅವರು ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ಅಟಲ್‌ಬಿಹಾರಿ ವಾಜಪೇಯಿಯವರ ಸರ್ಕಾರದಲ್ಲಿ ಕೇಂದ್ರ ವಿಮಾನಯಾನ ಖಾತೆ ಮತ್ತು ಪ್ರವಾಸೋದ್ಯಮ ಸಚಿವರಾಗಿ ಹಾಗೂ ನಂತರದ ದಿನಗಳಲ್ಲಿ ರಾಜ್ಯದ ಹಣಕಾಸು ಮಂತ್ರಿಗಳಾಗಿ ಸೇವೆಯನ್ನು ಸಲ್ಲಿಸಿದ್ದರು. ವಾಸ್ತವಿಕವಾಗಿ ಅವರು ನನಗೆ ತುಂಬಾ ಪರಿಚಿತರು ಮತ್ತು ನಮ್ಮ ಪಕ್ಷದ ಮುಖಂಡರಾಗಿದ್ದರು. ಅವರು ನಮಗೆಲ್ಲಾ ಮಾರ್ಗದರ್ಶನಗಳನ್ನು ಮತ್ತು ತಮ್ಮ ಅನುಭವಗಳನ್ನೆಲ್ಲಾ ಹೇಳಿಕೊಡುತ್ತಿದ್ದರು. ಅವರು ಯಾವುದೇ ವಿಚಾರವನ್ನು ಮಂಡನೆ ಮಾಡಲಿ, ಯಾವ ಗೊಂದಲವು ಇಲ್ಲದೇ ಅತ್ಯಂತ ಸ್ಫುಟವಾಗಿ ವಿಷಯದ ಮೇಲೆ ಸಮರ್ಥನೆ ಮಾಡುವಂಥ ರೀತಿಯಲ್ಲಿ ನಮ್ಮನ್ನೆಲ್ಲಾ ಅವರ ವಿಚಾರಗಳತ್ತ ಸೆಳೆಯುತ್ತಿದ್ದಂತಹ ವಿಶೇಷತೆಯನ್ನು ನಾನು ಕಂಡಿದ್ದೇನೆ. ಕೊನೆಯ ದಿನಗಳಲ್ಲಿ ಅವರು ನನಗೆ ಸಿಕ್ಕಿದಾಗ, ಪ್ರಚಲಿತ ರಾಜಕಾರಣದ ವಿದ್ಯಮಾನಗಳ ಬಗ್ಗೆ ಹಾಗೂ ಅನೇಕ ವಿಚಾರಗಳನ್ನು ಹಂಚಿಕೊಂಡಿದ್ದರು. ಅವರ ಆತ್ಮಕ್ಕೆ ಸದ್ಗತಿ ಸಿಗಲಿ ಎಂದು ಈ ಮೂಲಕ ತಮ್ಮ ಪ್ರಸ್ತಾಪಕ್ಕೆ ಸಹಮತ ಕೊಡುತ್ತಿದ್ದೇನೆ.

ಮಾನ್ಯ ಸಭಾನಾಯಕರು ಹೇಳಿರುವಂತೆ, ಡಾ॥ ಗಿರೀಶ್ ರಘುನಾಥ್ ಕಾರ್ನಾಡ್ ರವರ ಬಗ್ಗೆ ಹೇಳುವುದಾದರೆ, ಅವರು ಒಬ್ಬ ಪ್ರತಿಭಾವಂತ ಸಾಹಿತಿ. ಅವರು ಎಷ್ಟು ಪ್ರಶಸ್ತಿ ಪಡೆದುಕೊಂಡಿದ್ದಾರೆಂದು ನಮಗೆ ಪೂರ್ಣ ಲೆಕ್ಕ ಸಿಗುವುದು ಕಷ್ಟವೆನಿಸುತ್ತದೆ. ಅವರು ಒಬ್ಬ ಉತ್ತಮ ನಾಟಕಕಾರ, ಸರ್ವಶ್ರೇಷ್ಠ ಸಾಹಿತಿಯಾಗಿದ್ದರು. ಅವರು ಬರೀ ನಾಟಕ ಕ್ಷೇತ್ರಕ್ಕೆ ಮಾತ್ರವಲ್ಲದೇ ರಂಗಭೂಮಿಗೆ ಅತ್ಯಂತ ಅದ್ಭುತವಾದಂಥ ಕೊಡುಗೆಯನ್ನು ಕೊಟ್ಟಿದ್ದಾರೆ. ಅವರು ಒಬ್ಬ ಶ್ರೇಷ್ಠನಟ, 'ರಂಗ ಶಂಕರ'ದಲ್ಲಿ ಹಿನ್ನೆಯ ವಿಚಾರಕ್ಕೆ ಅವರ ಧ್ವನಿಯನ್ನು ಉಪಯೋಗಿಸಿಕೊಳ್ಳುತ್ತಿದ್ದರಂತೆ. ರಾಷ್ಟ್ರಪತಿಯಾಗಿದ್ದಂತಹ ಡಾ॥ಎ.ಪಿ.ಜೆ.ಅಬ್ದುಲ್ ಕಲಾಂರವರ ಚರಿತ್ರೆಗೆ ಸಂಬಂಧಪಟ್ಟಂತಹ ವಿಚಾರದಲ್ಲಿ ಅವರ ಧ್ವನಿಯನ್ನು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬಳಸಿಕೊಂಡಿದ್ದಾರಂತೆ. ನಾಟಕದಲ್ಲಿ, ಸಾಹಿತ್ಯದಲ್ಲಿ ಮತ್ತು ಕಲೆಯಲ್ಲಿ ಅವರ ರಂಗಭೂಮಿಯ ವಿಚಾರದಲ್ಲಿ ಸ್ತ್ರೀ ಕೇಂದ್ರಿತವಾದಂತಹ ವಿಚಾರಗಳನ್ನು ಮಂಡಿಸುತ್ತಿದ್ದರು. ಸ್ತ್ರೀಯರ ಶೋಷಣೆಯ ವಿರುದ್ಧ ಜನಜಾಗೃತಿ ಮೂಡಿಸುವಲ್ಲಿ ಅವರ ಕೃತಿಗಳು, ಸಾಹಿತ್ಯ, ನಾಟಕ ಮತ್ತು ಸಿನಿಮಾಗಳು ಪರಿಣಾಮಕಾರಿಯಾಗಿ ಕೆಲಸ ಮಾಡಿದೆ ಎನ್ನುವಂಥ ಮಾತಿದೆ. ಅವರಿಗೆ ಜ್ಞಾನಪೀಠ ಪ್ರಶಸ್ತಿ, ಪದ್ಮಶ್ರೀ, ಪದ್ಮಭೂಷಣ, ಸಾಹಿತ್ಯ ಅಕಾಡೆಮಿ ಹಾಗೂ ಅನೇಕ ಪ್ರಶಸ್ತಿಗಳು ಸಿಕ್ಕಿವೆ. ಅವರ "ಮಾನಿಶದ, ಯಯ್ಯಾತಿ, ತುಘಲಕ್, ಎತ್ತಿನ ಹುಂಜ, ನಾಗಮಂಡಲ ಮತ್ತು ತಲೆದಂಡ" ಈ ರೀತಿಯ ಅನೇಕ ನಾಟಕಗಳು ಪರಿಣಾಮಕಾರಿಯಾಗಿವೆ. ಒಂದು ವಿಶೇಷವೇನೆಂದು ಹೇಳಿದರೆ, ಅವರಲ್ಲಿರುವಂಥ ವೈಚಾರಿಕ ವಿಚಾರಗಳನ್ನು ಒಂದೊಂದು ಬಾರಿ ನಮ್ಮಂಥವರಿಗೆ ಅರ್ಥ ಮಾಡಿಸುವುದು ಬಹಳ ಕಷ್ಟ. ಅದೆಲ್ಲವನ್ನೂ ಸಮರ್ಥನೆ ಮಾಡುವಾಗ ಎಲ್ಲೋ ಒಂದು ಕಡೆ ಅವರ ವಿಚಾರಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವೆಂದು ನನಗೂ ಕೂಡ ಅನಿಸಿಬಿಟ್ಟಿತು. ನಾಟಕ, ಕಲೆ ಮತ್ತು ಸಾಹಿತ್ಯದ ನಡುವೆ ಅನೇಕ ಅಭಿಪ್ರಾಯ ಭೇದಗಳಿಗೆ ಮತ್ತು ಸಂಘರ್ಷಗಳಿಗೂ ಕೂಡ ಅವರ ವಿಚಾರಗಳು ಕಾರಣವಾಗುತ್ತಿದ್ದವೆಂದು ನನಗೆ ಅನಿಸುತ್ತದೆ. ಒಂದೊಂದು ಬಾರಿ ಅವರು ನಾವೆಲ್ಲರೂ ನಕ್ಸಲರನ್ನು ವಿರೋಧ ಮಾಡುತ್ತಿರುವಾಗ, ಅವರು ನಾನು ಕೂಡ ನಕ್ಸಲ ಎಂದು ಹೇಳಿರುವಂತಹ ರೀತಿ ಇತ್ತು. ಅದು ನಮಗೆ ಅರ್ಥ ಆಗಿಲ್ಲ. ಆದರೆ, ಪ್ರಜಾಪ್ರಭುತ್ವದ ವಿಮರ್ಶೆಯಲ್ಲಿ ನಾವೆಲ್ಲರೂ ಅದನ್ನು ಒಪ್ಪಲೇಬೇಕು. ಯಾವುದೋ ಒಂದು ರೀತಿಯಲ್ಲಿ ತಮ್ಮ ವಿಚಾರವನ್ನು ಮಂಡನೆ ಮಾಡುವುದನ್ನು ನಾವು ಕಂಡಿದ್ದೇವೆ. ಅವರು 'ಕಾಣದ ದೇವರನ್ನು ನಂಬಲಾರೆ' ಎಂದು ಹೇಳುತ್ತಿದ್ದರು. ಕೊನೆಗೂ ಕೂಡ ಅವರ ಸಂಸ್ಕಾರ, ಯಾವುದೇ ಧರ್ಮದ, ಸಂಪ್ರದಾಯದ ಪ್ರಕಾರ ಆಗಬಾರದು ಎಂದು ಹೇಳಿದ್ದರು. ನಮ್ಮ ಸರ್ಕಾರದ ಮಂತ್ರಿಗಳು ಅವರ ಕುಟುಂಬದವರ ಬಳಿ ಹೋಗಿ ಸರ್ಕಾರಿ ಗೌರವಗಳೊಂದಿಗೆ ಸಂಸ್ಕಾರ ಮಾಡಲು ವಿನಂತಿ ಮಾಡಿದರಂತೆ. ಆದರೆ ಇಲ್ಲ, ನಮ್ಮ ತಂದೆಯವರು ಹೇಗೆ ಹೇಳಿದ್ದಾರೆ, ಅದೇ ರೀತಿ ಆಗಬೇಕೆಂದು ಅವರ ಕುಟುಂಬದವರು ಕೂಡ ಹೇಳಿ, ಸಹಮತವನ್ನು ಕೊಡಲಿಲ್ಲ. ಹಾಗಾಗಿ, ಒಂದೊಂದು ಬಾರಿ 'ಕಾಣದ ದೇವರನ್ನು ನಂಬಲಾರೆ' ಎಂದು ಹೇಳಿರುವಂತಹ ಡಾ॥ ಗಿರೀಶ್ ಕಾರ್ನಾಡ್‌ರವರು ಬಾವುಕರಾಗಿ ಮೈಸೂರು ದಸರ ಉತ್ಸವವನ್ನು ಉದ್ಘಾಟನೆ ಮಾಡುವಾಗ, ಒಂದಷ್ಟು ಜನ ಅವರ ಬಗ್ಗೆ ಪ್ರಶ್ನೆಗಳನ್ನು ಮಾಡಿದರು. ಅವರು ಪ್ರಶ್ನೆ ಮಾಡಿದ್ದು ಸರಿಯೋ ಅಥವಾ ಇವರು ಮಾಡಿದ್ದು ಸರಿಯೋ ಅಥವಾ ತಪ್ಪು ಎಂಬುದನ್ನು ನಾವು ಚರ್ಚೆ ಮಾಡುವುದಲ್ಲ. ಅಂತೂ ಎಲ್ಲಾ ವಿಚಾರಗಳನ್ನು ಕೂಡ ಬದುಕಿನಲ್ಲಿ ಸಂಘರ್ಷದ ಮೂಲಕವೇ ಒಂದಷ್ಟು ಸಮಾಜಕ್ಕೆ ವಿಚಾರವನ್ನು ಕೊಡುತ್ತಿದ್ದಂತಹ ಅಪರೂಪದ ವ್ಯಕ್ತಿತ್ವವನ್ನು ಹೊಂದಿದ್ದಂತಹ ಡಾ॥ ಗಿರೀಶ್ ಕಾರ್ನಾಡ್‌ರವರಲ್ಲಿ ನಾನು ಕಂಡಿದ್ದೆ. ಅವರು ಅತ್ಯಂತ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರತಿಭಾವಂತರು ಎನ್ನುವಂಥ ವಿಚಾರದಲ್ಲಿ ಎರಡು ಮಾತಿಲ್ಲ. ಹಾಗಾಗಿ, ಅಂತಹ ಶ್ರೇಷ್ಠ ವ್ಯಕ್ತಿಗೆ ತಾವು ಮಂಡನೆ ಮಾಡಿರುವಂಥ ಈ ಸಂತಾಪಕ್ಕೆ ನನ್ನ ಸಹಮತಗಳನ್ನು ವ್ಯಕ್ತಪಡಿಸುತ್ತೇನೆ.

ಮಾಸ್ಟರ್ ಹಿರಣಯ್ಯನವರ ಬಗ್ಗೆ ಮಾನ್ಯ ಸಭಾನಾಯಕರು ಹೇಳಿದಂತಹ ಮಾತುಗಳನ್ನು ಮತ್ತೊಮ್ಮೆ ಉಲ್ಲೇಖ ಮಾಡಬೇಕಾದಂತಹ ಅಗತ್ಯತೆ ಇಲ್ಲ. ತಾವು ಕೂಡ ಅತ್ಯಂತ ಅರ್ಥಪೂರ್ಣವಾಗಿ ವಿಚಾರಗಳನ್ನು ಮಂಡಿಸಿದ್ದೀರಿ. ತುರ್ತುಪರಿಸ್ಥಿತಿಯ ಕರಾಳ ದಿವಸಗಳಲ್ಲಿ ವಾಕ್ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ ಮತ್ತು ವ್ಯಕ್ತಿ ಸ್ವಾತಂತ್ರ್ಯ ಇವೆಲ್ಲವೂ ಹರಣ ಆಗಿತ್ತು. ಸರ್ಕಾರದ ವಿರುದ್ಧ ಮಾತನಾಡುವುದಕ್ಕೆ ಸಾಧ್ಯವೇ ಇರಲಿಲ್ಲ. ಅಂತಹ ಸಂದರ್ಭದಲ್ಲಿ ಮಾಸ್ಟರ್ ಹಿರಣಯ್ಯನವರು ಅವರ 'ಲಂಚಾವತಾರ', 'ನಡುಬೀದಿ ನಾರಾಯಣ' ನಾಟಕಗಳ ಮೂಲಕ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಅವರು ಪಟ್ಟಿರುವಂತಹ ಶ್ರಮ ಅದ್ವಿತೀಯ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪತ್ರಿಕೆಗಳು ಎಲ್ಲವೂ ಕೂಡ ಸ್ತಬ್ಧವಾಗಿರುವಂಥ ಸ್ಥಿತಿ ಇರುವಾಗ ಮಾಸ್ಟರ್ ಹಿರಣಯ್ಯನವರು ತನ್ನ ನಾಟಕದ ಮೂಲಕ ಜನಜಾಗೃತಿಯನ್ನು ಮೂಡಿಸುತ್ತಿದ್ದರು. ಅವರ ಬಗ್ಗೆ ತುಂಬಾ ಟೀಕೆಗಳು ಇದ್ದವು. ಅನೇಕ ರಾಜಕಾರಣಿಗಳು ಅವರು ಸರಿ ಇಲ್ಲವೆಂದು ವಿರೋಧಿಸುತ್ತಿದ್ದರು. ಆದರೆ, ಅವರ ಮಾತುಗಳೆಲ್ಲವೂ ಸರಿಯಾಗಿ ಕೇಳಿ ಅವರ ಎದುರಿಗೆ ಕುಳಿತುಕೊಂಡಾಗ ಸರಿ ಇರಬಹುದೇನೋ ಎನಿಸುತ್ತಿತ್ತು. ಹಾಗಾಗಿ, ಎಲ್ಲಾ ರಂಗಗಳ ಬಗ್ಗೆ ಅವರು ನಾಟಕಗಳ ಮೂಲಕ ಮಾಡಿರುವಂಥ ಕ್ರಾಂತಿಕಾರಿ ಘಟನೆಗಳು, ವ್ಯವಸ್ಥೆಗಳು ಇದೆಯೆಯಲ್ಲಾ ಬಹುಶಃ ಈ ದೇಶದಲ್ಲಿ ಮತ್ತೊಬ್ಬ ಮಾಸ್ಟರ್ ಹಿರಣಯ್ಯ ಹುಟ್ಟಿ ಬರುವುದು ಸುಲಭವಲ್ಲ ಎನ್ನುವಷ್ಟರ ಮಟ್ಟಕ್ಕೆ ಅವರು ಆ ದಿವಸಗಳಲ್ಲಿ ಬೆಳೆದಿದ್ದರು. ಅಂತಹ ಒಬ್ಬ ಅಪರೂಪದ ವ್ಯಕ್ತಿಯಾಗಿದ್ದರು. ಕೇವಲ ಕಲೆಯ ಮೂಲಕ ಸಮಾಜದ ಅಂಕು-ಡೊಂಕುಗಳನ್ನು ತಿದ್ದುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ತೋರಿಸಿದರು. ಮತ್ತೆ ಎಂತಹ ಸವಾಲುಗಳು ಎದುರಾದರೂ ಕೂಡ ನಿಭಾಯಿಸುತ್ತಿದ್ದರು. ಅನೇಕ ಹಿರಿಯ ರಾಜಕಾರಣಿಗಳ ಬಗ್ಗೆ ಅವರು ಆ ಪಕ್ಷ, ಈ ಪಕ್ಷ ಎಂದು ಹೇಳದೇ ಎಲ್ಲಾ ರಾಜಕಾರಣಿಗಳ ಬಗ್ಗೆಯೂ ಕೂಡ ಟೀಕಿಸುತ್ತಿದ್ದರು. ಆದರೆ, ಟೀಕೆ ಮಾಡಿದ್ದಕ್ಕೆ ಕ್ಷಣ ಕಾಲ ಕೋಪ ಬರುತ್ತಿತ್ತೇ ಹೊರತು, ಅವರು ಹೇಳಿರುವಂಥ ಮಾತುಗಳಲ್ಲಿ ಸತ್ಯ ಇದೆ, ಎನ್ನತಕ್ಕಂಥ ಅರಿವು ಆಗುವುದಕ್ಕೆ ಸಾಧ್ಯವಾಗಿತ್ತು. ಹಾಗಾಗಿ, ಮಾಸ್ಟರ್ ಹಿರಣಯ್ಯನವರು ಒಬ್ಬ ಅಪರೂಪದ ವ್ಯಕ್ತಿಯಾಗಿ ನಮಗೆ ಕಂಡುಬಂದಿದ್ದಾರೆ. ಅವರು ಕಲೆಯ ಮೂಲಕ ಸಮಾಜದ ಅಂಕು-ಡೊಂಕುಗಳನ್ನು ತಿದ್ದಿದಂತಹ ಮಾಸ್ಟರ್ ಹಿರಣಯ್ಯನವರು ಅತ್ಯಂತ ಶ್ರೇಷ್ಠ ವ್ಯಕ್ತಿಯಾಗಿದ್ದರು ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ನೆನಪು ಮಾಡುವುದಕ್ಕೆ ಇಷ್ಟಪಡುತ್ತೇನೆ. ಈ ಮೂಲಕ ತಮ್ಮ ಪ್ರಸ್ತಾಪಕ್ಕೆ ಸಹಮತ ಕೊಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನು ಶ್ರೀ ಕೆ.ಎಲ್.ಶಿವಲಿಂಗೇಗೌಡ ಇವರು ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಮೂರು ಬಾರಿ ವಿಧಾನಸಭೆಯ ಗೌರವಾನ್ವಿತ ಶಾಸಕರಾಗಿದ್ದಂತಹವರು. ಬಿಜಾಪುರ ಜಿಲ್ಲೆಯ ಬಳ್ಳೊಳ್ಳಿ ಕ್ಷೇತ್ರದಿಂದ 4 ಮತ್ತು 6ನೇ ಬಾರಿಗೆ ವಿಧಾನಸಭೆಗೆ ಆಯ್ಕೆಯಾಗಿದ್ದರು. ಅದ್ಭುತವಾದಂತಹ ವಾಕ್ ಚಾತುರ್ಯವನ್ನು ಹೊಂದಿರುವ ಸೈದ್ಧಾಂತಿಕ ವಿಷಯಗಳಲ್ಲಿ ರಾಜಿಯೇ ಮಾಡಿಕೊಳ್ಳದೇ ಇರುವಂತಹ ಅಪರೂಪದ ವ್ಯಕ್ತಿಯಾಗಿದ್ದರು. ಈ ಮೂಲಕ ತಮ್ಮ ಪ್ರಸ್ತಾಪಕ್ಕೆ ಸಹಮತ ಕೊಡುತ್ತಿದ್ದೇನೆ.

ಶ್ರೀ ಎಸ್.ಎಸ್.ಅರಕೇರಿ (ಸಿದ್ದಾರ್ಥ ಸಂಗಪ್ಪ ಅರಕೇರಿ)ಯವರು 4ನೇ ಮತ್ತು 6ನೇ ವಿಧಾನಸಭೆಗೆ ಆಯ್ಕೆಯಾಗಿದ್ದರು. ಅದೇ ರೀತಿಯಲ್ಲಿ ಶ್ರೀಮತಿ ದಮಯಂತಿ ಬೋರೇಗೌಡರವರು 5ನೇ ಮತ್ತು 9ನೇ ವಿಧಾನಸಭೆಗೆ ಆಯ್ಕೆಯಾಗಿದ್ದರು. ಶ್ರೀ ಚನ್ನವೀರಯ್ಯ ಶಾಂತಯ್ಯ ಮುತ್ತಿನ ಪೆಂಡಿಮಠರವರು ಗದಗ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದರು. ಒಬ್ಬ ಅತ್ಯುತ್ತಮ ಸಂಸದೀಯ ಪಟು ಆಗಿರುವಂತಹ ಕೀರ್ತಿಗೆ ಪಾತ್ರರಾಗಿ, ಗದಗ ನಗರಕ್ಕೆ ತುಂಗಭದ್ರಾ ನೀರನ್ನು ಪೂರೈಕೆ ಮಾಡಲು ಕ್ರಾಂತಿಕಾರಿ ಕೆಲಸದಲ್ಲಿ ಶ್ರಮವಹಿಸಿ ದುಡಿದಿದ್ದರು. ಡಾ॥ವಿಜಯಕುಮಾರ ಖಂಡ್ರೆಯವರು ಗೌರವಾನ್ವಿತ ಶಾಸಕರು ಆಗಿದ್ದರು. 1989ನೇ ಇಸವಿಯಲ್ಲಿ ಭಾಲ್ಕಿ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ವೃತ್ತಿಯಲ್ಲಿ ವೈದ್ಯರಾಗಿ ಜನಪ್ರಿಯತೆ ಗಳಿಸಿದ್ದರು. ಶ್ರೀ ಹೆಚ್.ಗೋಪಾಲ್ ಭಂಡಾರಿಯವರು ಕರಾವಳಿ ಜಿಲ್ಲೆಯವರಾಗಿದ್ದರು. ಅವರನ್ನು ನಾನು ಬಹಳ ಹತ್ತಿರದಿಂದ ಕಂಡಿದ್ದೇನೆ. ನಾನು ಕರಾವಳಿ ಜಿಲ್ಲೆಯ ಗೋಪಾಲ್ ಭಂಡಾರಿಯವರನ್ನು ಬಹಳ ಹತ್ತಿರದಿಂದ ಕಂಡಿದ್ದೆ. ಅವರ ಕ್ಷೇತ್ರಕ್ಕೆ ಚುನಾವಣಾ ಪ್ರಚಾರಕ್ಕಾಗಿ ಹೋಗಿದ್ದೆ. ಪ್ರಚಾರಕ್ಕೆ ಹೋದಂತಹ ಸಂದರ್ಭದಲ್ಲಿ ನಾನು ಅವರ ಬಗ್ಗೆ ಟೀಕೆ ಮಾಡಿದ್ದೆ. ಆ ದಿಸೆಯಲ್ಲಿ ಅವರು ಮತ್ತೆ ನನ್ನ ಮುಖವನ್ನು ನೋಡುವುದಿಲ್ಲವೆಂದುಕೊಂಡಿದ್ದೆ. ಆಕಸ್ಮಿಕವಾಗಿ ನಾನು ಹೋಟೆಲ್‌ಗೆ ಹೋಗಬೇಕೆಂದು ನನ್ನ ಕಾರನ್ನು ನಿಲ್ಲಿಸಿದಾಗ ಅವರು ನನ್ನ ಕಾರನ್ನು ನೋಡಿ ಮುಂದೆ ಹೋಗಿದ್ದವರು ಮತ್ತೆ ವಾಪಸ್ಸು ಬಂದು ನನ್ನ ಜೊತೆಯಲ್ಲಿಯೇ ಕಾಫಿಯನ್ನು ಕುಡಿದು ಹೋದರು. ನಾನು ನೆನ್ನೆಯ ದಿವಸವೇ ಅವರ ಬಗ್ಗೆ ಮಾತನಾಡಿದ್ದೆ. ಅದರ ಬಗ್ಗೆ ಏನಾದರು ಹೇಳುತ್ತಾರೆಂದು ಭಯವಿತ್ತು. ಆದರೆ ಅವರು ಅದ್ಯಾವುದರ ಬಗ್ಗೆಯೂ ಗಮನದಲ್ಲಿಟ್ಟುಕೊಳ್ಳದೇ ಮತ್ತೆ ಅವರ ಬಗ್ಗೆ ಗೌರವ ಬರುವ ರೀತಿಯಲ್ಲಿ ವಾತಾವರಣವನ್ನು ಉಂಟು ಮಾಡುತ್ತಿದ್ದಂತಹ ಅಪರೂಪದ ರಾಜಕಾರಣಿಯಾಗಿ ಅವರಲ್ಲಿ ಕಂಡಿದ್ದೆ. ಅವರು ಬಹಳ ಸಣ್ಣ ಜನಾಂಗವಾದ ಭಂಡಾರಿ ಜನಾಂಗದಿಂದ ಬಂದಂಥವರು. ಒಂದೆರಡು ಕುಟುಂಬ ಮಾತ್ರ ಇತ್ತು ಎಂದು ಅನ್ನಿಸುತ್ತದೆ. ಅವರು ವೃತ್ತಿಯಲ್ಲಿ ಕ್ಷೌರಿಕ ಕುಟುಂಬದಿಂದ ಬಂದಂಥವರು. ಅವರು ಬೆಳೆದು ಬಂದಂತಹ ರೀತಿ, ಅವರ ವಿಚಾರಗಳು ನನಗೆ ಯಾವಾಗಲೂ ಆಶ್ಚರ್ಯವೆನಿಸುತ್ತದೆ. ಒಂದನ್ನು ಉಲ್ಲೇಖ ಮಾಡಿ ಹೇಳುವುದೇನೆಂದರೆ, ಬೆಳಿಗ್ಗೆ ಎದ್ದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರಿ ಬಸ್‌ನಲ್ಲಿ ಅವರ ಊರಿಗೆ ಪ್ರಯಾಣವನ್ನು ಮಾಡುತ್ತಿದ್ದಾಗ, ಅವರ ಮೊಬೈಲ್‌ನಲ್ಲಿ ಮಾತನಾಡುತ್ತಿದ್ದಾಗ, ಯಾರದರು ಮಾತನಾಡುತ್ತಿದ್ದರೆ ಡ್ರೈವರ್ ಮತ್ತು ಕಂಡಕ್ಟರ್, ಅಕ್ಕ ಪಕ್ಕದವರು ಸಾಮಾನ್ಯವಾಗಿ ಗಮನಿಸುತ್ತಿರುತ್ತಾರೆ. ಇದ್ದಕ್ಕಿದ್ದ ಅವರು ಮಾತುಗಳನ್ನು ನಿಲ್ಲಿಸಿಬಿಡುತ್ತಾರೆ. ಮುಂದೆ ಏನಾಯಿತು ಎಂದು ಯಾರಿಗೂ ಗೊತ್ತಾಗಲೇ ಇಲ್ಲ. ಬೇರೆಯವರು ಮಾತನ್ನು ಮುಗಿಸಿರಬೇಕೆಂದು ಕೊಂಡರು. ಆದರೆ ಅಲ್ಲಿಯೇ ಹೃದಯಾಘಾತಕ್ಕೆ ತುತ್ತಾಗಿ ಸಾವನ್ನಪ್ಪಿದ್ದಾರೆ ಎನ್ನುವಂತಹ ಮಾಹಿತಿ ಸಿಗುತ್ತದೆ. ಅವರು ಚುನಾವಣೆಯಲ್ಲಿ ಎರಡು ಸಾರಿ ಜಯಗಳಿಸಿದ್ದರು. ಮತ್ತು ಎರಡು ಸಾರಿ ಚುನಾವಣೆಯಲ್ಲಿ ಪರಾಭಾವವನ್ನು ಹೊಂದಿದ್ದರು. ಸ್ವಾಭಾವಿಕವಾಗಿ ಅಧಿಕಾರ ಇಲ್ಲದೇ ಇದ್ದಾಗ ಜನ ಕಡಿಮೆ ಇರುತ್ತಾರೆಂದು ನಾವು ಅಂದುಕೊಂಡಿರುತ್ತೇವೆ. ಆದರೆ ಅವರು ನಿಧನವಾದಂತಹ ದಿವಸ ಅಲ್ಲಿ ಸೇರಿದಂತಹ ಜನಸ್ತೋಮವನ್ನು ನೋಡಿದರೆ ಮತ್ತು ಅವರ ಸಾವಿನ ಬಗ್ಗೆ ಅಲ್ಲಿ ನೆರೆದಿದ್ದ ಜನಗಳ ಮಾತುಗಳನ್ನು ಕೇಳಿದ್ದರೆ ಅವರು ಬಡವರ ಬಗ್ಗೆ ಕೆಲಸ ಮಾಡುತ್ತಿದ್ದರಿಂದ ಇಷ್ಟೊಂದು ಎತ್ತರಕ್ಕೆ ಬೆಳೆದಿದ್ದರು ಎನ್ನುವುದು ಗೊತ್ತಾಗುತ್ತಿತ್ತು. ಅವರು ಯಾವ ಪಕ್ಷದವರಾಗಿದ್ದರೂ ಕೂಡ ಅವರು ಆದರ್ಶವಾಗಿದ್ದರು ಎಂದು ನಮಗನಿಸುತ್ತದೆ. ಇಂತಹ ಶ್ರೇಷ್ಠ ವ್ಯಕ್ತಿಯನ್ನು ಕಳೆದುಕೊಂಡಿರುವುದು ನೋವು ಎನಿಸುತ್ತದೆ.

ಶ್ರೀಮತಿ ಶಾರದವ್ವ ಎಂ.ಪಟ್ಟಣನವರು ವಿಧಾನಸಭಾ ಮಾಜಿ ಸದಸ್ಯರಾಗಿದ್ದರು. ಇವರು ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಿಂದ ಬಂದಿದ್ದರು.

ಡಾ॥ಎನ್.ಬಿ.ನಂಜಪ್ಪನವರು 9ನೇ ವಿಧಾನಸಭೆಗೆ ಶ್ರವಣಬೆಳಗೊಳ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ವೃತ್ತಿಯಲ್ಲಿ ವೈದ್ಯರಾಗಿದ್ದರು ಹಾಗೂ ಕೃಷಿಯನ್ನು ಕೂಡ ಮಾಡುತ್ತಿದ್ದರು. ಶಾಸಕರಾಗಿ ಮತ್ತು ವೈದ್ಯರಾಗಿ ಅಪಾರವಾದ ಕೆಲಸವನ್ನು ಸಮಾಜಕ್ಕೆ ಮಾಡಿದ್ದರು.

ಇನ್ನು ಶ್ರೀ ಎಂ.ಸತ್ಯನಾರಾಯಣರವರು 13ನೇ ವಿಧಾನಸಭೆಗೆ ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದರು.

ಶ್ರೀ ಸಾಂಭಾಜಿ ಲಕ್ಷ್ಮಣ ಪಾಟೀಲ್‌ರವರು 14ನೇ ವಿಧಾನಸಭೆಗೆ ಬೆಳಗಾವಿ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಆಯ್ಕೆಯಾಗಿದ್ದರು. ಶ್ರೀಯುತರು ಬೆಳಗಾವಿಯ ಗಡಿ ವಿಷಯದ ಹೋರಾಟದಲ್ಲಿ ಮಂಚೂಣಿಯಲ್ಲಿ ಕೆಲಸ ಮಾಡಿದ್ದರು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗ ತಾವೇನು ಸಂತಾಪ ಸೂಚನೆಯನ್ನು ತೆಗೆದುಕೊಂಡು ಬಂದಿದ್ದೀರಿ, ಅದಕ್ಕೆ ನನ್ನ ಬೆಂಬಲ ನೀಡುತ್ತಾ ಅಗಲಿರುವಂತಹ ಎಲ್ಲರ ಆತ್ಮಕ್ಕೆ ಚಿರಶಾಂತಿಯನ್ನು ಕೊಟ್ಟು ಸದ್ಗತಿಯನ್ನು ಭಗವಂತ ನೀಡಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**(ಮುಂದು..)**

**(84)12.7.2019/2.20/ಎಂ.ಎಂ-ಕೆ.ಎಸ್**

(ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಮೃತರುಗಳ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಮೃತರುಗಳ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

**(ಸದನವು ಮಧ್ಯಾಹ್ನ 02 ಗಂಟೆ 23 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 15ನೇ ಜುಲೈ ಮಾಹೆ 2019ರ ಸೋಮವಾರದಂದು ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

******

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"